ಕೊರವಂಜಿ

Koravanji

ಏಪ್ರಿಲ್

೧೯೬೩

ಸಂಪಾದಕರು


ಶ್ರೀ|| ರಾ. ಶಿ.



ಬರಹಗಾರರು :

ಬಿಡಿ ಪ್ರತಿ

ತಿಳಿನಗೆಯ ಮಾಸಪತ್ರಿಕೆ


ನಿಮ್ಮೂರಿನ ಚಿತ್ರಮಂದಿರದಲ್ಲಿ
ನೋಡಿ ಆನಂದಿಸಿರಿ...
ರಾಯರ ಮಗಳು
ಜಿ.ವಿ. ಅಯ್ಯರ್
Indra
KATAKA
ವಿ.ಪಿ.ಸಿ



ಸಂಪುಟ ೨೨ ಏಪ್ರಿಲ್ ೧೯೬೩ ಸಂಚಿಕೆ ೧

ಹೊಸ ವರುಷದ ಹಾರೈಕೆ

ಶೋಭಕೃತ್ ಸಂವತ್ಸರದಲ್ಲಿ ನಾಡು, ಹಾಗೂ ಕಾಡಿನ, ಮೂಲೆ ಮೂಲೆಗಳಲ್ಲಿರುವ ಸಮಸ್ತರಿಗೂ, ಸಮಸ್ತಕ್ಕೂ, ಭಗವಂತನು ಶಾಂತಿ, ಸುಖ, ಆರೋಗ್ಯ, ಆಯಸ್ಸನ್ನು ಕರುಣಿಸಲಿ ಎಂದು ಕೊರವಂಜಿಯು ಪ್ರಾರ್ಥಿಸುತ್ತಾಳೆ

ಆದರೆ ಹಳ್ಳಿಯ ಹುಡುಗಿ, ಕೊರವಂಜಿ, ಈಗತಾನೆ ಇಪ್ಪತ್ತೊಂದರ ಪ್ರಾಯವನ್ನು ಮೀರಿದ್ದಾಳೆ. ಅವಳಿಗೆ ಸ್ವಲ್ಪ ಅನುಮಾನ ತಾನು ಕೇಳಿದ್ದನ್ನೆಲ್ಲಾ ಆಗು ಮಾಡಿ ಕೊಡಲು, ಭಗವಂತನಿಗೆ ಸಾಧ್ಯವೋ ಇಲ್ಲವೋ ಅಂತ.

ಆದಕ್ಕೇ ಅವಳು ಎರಡನೆಯ ಪ್ರಾರ್ಥನೆಯನ್ನು ಮಾಡಿದಳು. "ಭಗವಂತ! ಅಷ್ಟನ್ನೆಲ್ಲಾ ಮಾಡುವುದಕ್ಕೆ ನಿನಗೆ ಬೇಡದೆ ಇದ್ದರೆ, ಹೋಗಲಿ ಬಿಡಪ್ಪಾ! ಆದರೆ ನನ್ನ ಓದುಗರಿಗೆ, ನನ್ನ ಒಲವಿಗರಿಗೆ, ಕೂಡಿ ಆಡುವವರಿಗಾದರೂ, ಕಾಸುಕೊಟ್ಟು ಕಣಿ ಹೇಳಿಸಿ ನಲಿಯುವವರಿಗಾದರೂ ಸುಖ ಶಾಂತಿ ಸಮೃದ್ಧಿಗಳನ್ನು ಶೋಭಕೃತ್ ವರ್ಷದಲ್ಲಿ ಕರುಣಿಸಪ್ಪ" ಎಂದು

ಒಲವಿನಿಂದ ದುರಾಸೆ ಇಲ್ಲದೆ ಸ್ವಲ್ಪವನ್ನೇ ಬೇಡಿದ ಕೊರವಂಜಿಯ ಬೇಡಿಕೆಯನ್ನು ಭಗವಂತ ಈಡೇರಿಸಿ ಕೊಡುತ್ತಾನೆ ಎಂಬ ಧೃಡ ನಂಬಿಕೆ

ನಸ್ಕಿಸರು ಕೊರವಂಜಿ

★ ಕುಹಕಿಡಿಗಳು ★

ಸ್ವಲ್ಪ "ನೀರಾ"ನಾದರೂ ಮೊರಾರ್ಜಿಯವರಿಗೆ ಬಡ್ಜೆಟ್ ಭಾಷಣಕ್ಕೆ ಮುಂಚೆ ಕುಡಿಸಿದ್ದರೆ, ಆಗ ಪ್ರಾಯಶಃ ತೆರಿಗೆ ಬಿಗಿತವು ಸ್ವಲ್ಪವಾದರೂ ಸಡಿಲವಾಗಿರುತ್ತಿತ್ತೇನೋ!

*　　*　　*　　*

ಇದೇನೋ ಶಾಮು! ಮೂರು ಬೀಡಗಳನ್ನು ಕೊಂಡುಕೊಂಡೆ. ಈ ಮಾಲೆ ಬರುತ್ತೆ ಕಣೋ ಅಂದರೆ. ಅದನ್ನು ತಿನ್ನಲ್ಲ ಮಾವಯ್ಯಾ! ಲವಂಗ ಎಳೆದುಕೊಂಡು ಮಿಕ್ಕಿದ್ದನ್ನು ಎಸೆದುಬಿಡ್ತೀನಿ ಅಂದುಬಿಡೋದೆ!

*　　*　　*　　*

ಎಂಟು ವಯಸ್ಸಿನಲ್ಲಿ—ಹಾಗೂ ಹದಿನೆಂಟರಲ್ಲಿ—ಹುಡುಗ ಹುಡುಗಿಯರು ಒಟ್ಟಿಗೆ ಓದಬಹುದಾದರೆ—೧೦–೧೪ರಲ್ಲಿ ಯಾಕೆ ಬೇಡ? ಅಂದರಂತೆ.

—ಎಂಟಕ್ಕೆ ದಂಟು ಅಂತಾರೆ—ಹದಿನೆಂಟಕ್ಕೆ ನೆಂಟು ಆಗಬಹುದು ಆದರೆ ೧೦–೧೪ರಲ್ಲಿ ಗಂಟು ಆಗಬಾರದು ಅಂತ.

*　　*　　*　　*

ದಕ್ಷಿಣ ಭಾಷಾ ಚಿತ್ರಗಳು ರಾಷ್ಟ್ರಾಧ್ಯಕ್ಷರ ಮೆಡಲನ್ನು ಈ ತನಕ ಗಳಿಸಿಲ್ಲ ಬಂಗಾಳಿ ಹಿಂದಿಯರೇ ಗಳಿಸಿದ್ದಾರೆ ಎಂದು ಸಚಿವರು ಹೇಳಿದರಂತೆ.

—ಅದು ಯಾಕೋ! ಅವರ ಚಿತ್ರಗಳನ್ನೇ ಥೇಟ್ ಕಾಪಿ ಹೊಡೀತ್ತೀವಿ ನಾವು, ಎಂದು ಕೆಲವರು ಉದ್ಗಾರ ತೆಗೆದರೆಂದು ಹೇಳುವುದು ನಿಜವಲ್ಲವಂತೆ.

*　　*　　*　　*

ಬಾಲಿ ದ್ವೀಪದಲ್ಲಿ ನಡೆದ ಅಗ್ನಿ ಪರ್ವತದ ಅನಾಹುತವನ್ನೂ, ಸಾಮ್ರಾಜ್ಯಶಾಹಿ ಅಮೆರಿಕನ್ನರು ಏರ್ಪಡಿಸಿದರು ಎಂದು ಇನ್ನೂ ಚೀಣಾ ಆಪಾದಿಸಿಲ್ಲವಂತೆ.

*　　*　　*　　*

ಬಡ್ಜೆಟ್ ಬಂದಮೇಲೆ ೩೦ ಪೌಂಡು ಕಳಕೊಂಡೆ

—ಇಂಗ್ಲೆಂಡಿನಲ್ಲಿ ದುಡ್ಡು ಯಾಕೆ ಇಟ್ಟೆಯೋ?

—- ಅಲ್ಲ! ಕಣೋ. ನನ್ನ ತೂಕದಲ್ಲೋ—ಅಂದನಂತೆ ಸಾಹುಕಾರ.

*　　*　　*　　*

ಚೀಣೀಯರ ಸಹಸ್ರಾರು ಬೂಟ್ಸು ಅಂಗಡಿಗಳು ಪಾಕಿಸ್ಥಾನದಲ್ಲಿ ಹೊಸದಾಗಿ ಶುರುವಾಗಿವೆಯಂತೆ.

—ಚೀಣೀಯರ ಜಾಯಮಾನವೇ ಹಾಗೆ! ಮೊದಲು ಕಾಲು ಹಿಡಿಯೋದು; ಅಮೇಲೆ ಅವಕಾಶ ಸಿಕ್ಕರೆ, ಬೂಟ್ಸು ಮೆಟ್ಟೋದು!

ಇದು ಕೇಳಿದ್ದಿರಾ

ಅವನ ಪರಿಚಯ ಮಾಡಿಸಿ ಕೊಡುವೆಯಾ

"ಕಾಮದಹನ"ವನ್ನು ಸ್ವರ್ಗದ ಬನದಲ್ಲಿ ಖುದ್ದು ದೇವೇಂದ್ರನ ಅಧ್ಯಕ್ಷತೆಯಲ್ಲೇ ಆಚರಿಸಿದ್ದರು. ಕಾಮಣ್ಣ ಕಟ್ಟಿಗೆ, ಭೀಮಣ್ಣ ಬೆರಣಿ ಅಂತ ಗಂಧರ್ವರು, ಯಕ್ಷರು, ಕಿನ್ನರರು, ಕಿಂಪುರುಷರು ಎಲ್ಲರೂ ಒಟ್ಟಿಗೇ ಬೋಲ ಬೋಲ ಮಾಡಿದ್ದರು. ತೀರ್ಥಪ್ರಸಾದವನ್ನು ಅಪ್ಸರೆಯರೇ ಧಾರಾಳವಾಗಿ ಬಡಿಸಿದ್ದರು.

ಬನದ ಒಂದು ತುದಿಯಲ್ಲಿ ಈಚಲಮರದ ನೆರಳಿನಲ್ಲಿ—ಓ! ಸ್ವರ್ಗದಲ್ಲಿ ಈಚಲಮರ ಯಾಕಾರೂ ಬಂದೀತು ಅಂದಿರಾ! ಈಚಲಮರ ಇಲ್ಲದೆ ಇದ್ದರೆ ಸ್ವರ್ಗ ತಾನೇ ಎಲ್ಲಿ ಬಂತ್ರಿ!—ನೆರಳಿನಲ್ಲಿ ಯೌವ್ವನ ಲಾವಣ್ಯದ ಖನಿಯಂತಿದ್ದ ಯಕ್ಷನೊಬ್ಬ ಲಾವಣ್ಯಮಯಿ ತರುಣಿಯನ್ನು ತಬ್ಬಿಕೊಂಡು, "ಪ್ರಿಯೆ! ನಿನಗಾಗಿ ನಾನು ಪ್ರಾಣಾರ್ಪಣೆ ಮಾಡಲೂ ಸಿದ್ಧ. ನೀನಿಲ್ಲದೆ ನಾನಿರಲಾರೆ. ದಿಟ. ಕುಬೇರ ನಿಗಿದ್ದಂತೆ ನನಗೆ ಹಣವಿಲ್ಲ. ಅವನಂತೆ ಮೋಜು ಖರ್ಚು ಮಾಡಲಾರೆ! ಆದರೆ ನನ್ನದೆಲ್ಲವೂ ನಿನ್ನದೆ" ಎಂದು ಅವಳ ಕಿವಿಯಲ್ಲಿ ಉಸುರಿದ

ಲತಾಬಾಹುಗಳಿಂದ ಆ ಲಾವಣ್ಯಮಹಿಯು ಯಕ್ಷಯುವಕನ ಕೊರಳನ್ನು ಹಗೂರಾಗಿ ಬಂದಿಸಿ, ತೋಳತೆಕ್ಕೆಯಲ್ಲಿ ಅವನನ್ನು ಭದ್ರಪಡಿಸಿ, ಅವನ ಕಿವಿಗೆ ಬಿರಿದ ದಾಳಿಂಬಿಯಂತಿದ್ದ ತನ್ನ ಬಾಯನ್ನು ತಾಕಿಸುತ್ತಾ ಮಂಜುಳ ಧ್ವನಿಯಲ್ಲಿ "ಪ್ರಿಯಾ! ಆ ನಿನ್ನ ಪರಿಚಯಸ್ಥ ಕುಬೇರನ ಮನೆ ಎಲ್ಲಿದೆ? ಅವ ಈ ಹಬ್ಬಕ್ಕೆ ಈ ಸಂಜೆ ಬಂದಿದ್ದಾನೆಯೇ! ಅವನ ಪರಿಚಯವನ್ನು ನನಗೆ ಮಾಡಿಸಿ ಕೊಡುವೆಯಾ" ಎಂದು ಪಿಸು ಪಿಸು ಕೇಳಿದಳಂತೆ.

* * * *

ಆಮೇಲೆ

ಚುನಾವಣೆಯಲ್ಲಿ ತನ್ನ ಷಾಗೀರ್ದು ಜಯ ಗಳಿಸಿದ್ದ. ಮಂತ್ರಿಯಾಗೋ ಖಾತ್ರಿ ಇತ್ತು ಆದ್ದರಿಂದ ಶಾಮಪ್ಪನಿಗೆ ಬಲು ಖುಷಿಯಾಗಿತ್ತು. ಷಹರಿನಿಂದ ಹಳ್ಳಿಗೆ ಚುನಾವಣಾ ಮೋಟಾರಲ್ಲಿ ಹಿಂತಿರುಗಿ ಬರುತಿದ್ದ. ದಾರಿಯಲ್ಲೇ ಎರಡೆತ್ತಿನ ಗಾಡಿಯೊಂದು ಬರುತಿತ್ತು. ಎತ್ತು ಬೆದರಿತೋ; ಮೋಟಾರೇ ಹೆದರಿತೋ ದೇವರೇ ಬಲ್ಲ. ಹಣಾ ಹಣಿ ಢಿಕ್ಕಿ ಹೊಡೆಯಿತು ಎತ್ತಿನ ಗಾಡಿಯ ಮೂಕಿಯಿಂದ ರಂಗಪ್ಪ ಕೆಳಕ್ಕೆ ಬಿದ್ದ. ಮೋಟಾರಿನಿಂದ ಶಾಮಪ್ಪ ಒಗೆಯಲ್ಪಟ್ಟಿದ

"ಮೋಟಾರು ಬಿಡುಕ್ಕೆ ಬರದೆ ಇದ್ದರೆ ಹುಸಾರಾಗಾದರೂ ಬಿಡಬೇಡವಾ" ಅಂದ ರಂಗಪ್ಪ, ಎದ್ದು ಕೂತುಕೊಂಡು 'ಗಾಡೀ ಹೊಡೆಯೋವಾಗ ಹುಸಾರಾಗಿಲ್ದೆ, ಎತ್ತು ಛಂಗೋದಕ್ಕೆ ಬಿಡೋದಾ" ಅಂದ ಶಾಮಪ್ಪ, ಕೂತಕಡೇನೆ ನೀವುಕೋತಾ

"ಆದದ್ದಾತು ಬಿಡ್ಲಾ! ನೋವಾಗ್ತದಾ" ಎಂದ ರಂಗಪ್ಪ.

"ಹ್ಞಾ ಕಣ್ಲಾ" ಎಂದ ಶಾಮಪ್ಪ.

"ತಡೀ ಹಂಗಾರಾ! ನೋಡ್ತೀನಿ" ಅಂದ ರಂಗಪ್ಪ ಎದ್ದು ಹೋಗಿ ಗಾಡಿ ಹಿಂದೆ ಕಟ್ಟಿದ್ದ ಒಂದು ಸೋರೆ ಬುರುಡೇನ ಬಿಡಿಸಿಕೊಂಡು ಬಂದ.

"ದೇವರ ದಯ! ಸೋರೆ ಬುರುಡೆ ಒಡೆದಿಲ್ಲ ಒಂದು ಗುಟುಕು ಕುಡಿ ನೋವು ಕಡಿಮೆ ಆಗ್ತೈತಿ. ಮೂರು ವಾರದ ಹಿಂದೆ ನಾನೇ ಭಟ್ಟಿ ಇಳಿಸಿದ್ದೆ" ಎಂದು ಹೇಳಿ ರಂಗಪ್ಪ ಬುರುಡೇನ ಶಾಮಪ್ಪನಿಗೆ ಕೊಟ್ಟ.

ಬಿರಡೇನ ತೆಗೆದು, ಗಟಗಟ ಅಂತ ನಾಲ್ಕು ಗುಟುಕು ಕುಡಿದ ಶಾಮಪ್ಪ. ಬುರುಡೇನ ಹಿಂತಿರುಗಿ ರಂಗಪ್ಪನಿಗೆ ಕೊಟ್ಟ. ಎರಡು ಸಾರಿ ತೇಗಿದ. ಹುಳಿ ಹುಳಿ ಗಬ್ಬು ವಾಸನೆ ಹೊಡೀತು.

ಬುರುಡೇಗೆ ಬಿರಡೇನ ಗಟ್ಟಿಯಾಗಿ ಜಡಿದ ರಂಗಪ್ಪ ಆ ಮೇಲೆ ಸಾಲು ಮರದ ಹಿಂದೆ ಹೋಗಿ ಅದನ್ನು ಒಚ್ಚಿಟ್ಟು ಬಂದ.

"ನೀನು ಕುಡಿಯಾಕಿಲ್ವಾ" ಎಂದು ಕೇಳಿದ ಶಾಮಪ್ಪ.

"ಪೋಲೀಸಿನೋರು ಬಂದು ತನಿಖೆಮಾಡಿ, ವರದಿ ಬರಕೊಂಡು ಹೋಗ್ಲಿ. ಆ ಮ್ಯಾಗ" ಎಂದ ರಂಗಪ್ಪ.

* * * *

"ವ್ಯಾಯಾಮ ಮಾಡಿದರೆ ಕೊಬ್ಬು ಹೆಚ್ಚಾಗಿ ಕಟ್ಟೋಲ್ಲ" ಅಂದರಂತೆ ಬೃಹಸ್ಪತಿಗಳು.

"ಮಾತಾಡೋ ಮದುಕೀರಿಗೆ ಎರಡು ಗಲ್ಲ ಹೇಗೆ ಬಂತೋ" ಅಂದರಂತೆ ಶುಕ್ರಾಚಾರ್ರು.

ಕಾಯುವುದರಲ್ಲೇ ಸೊಗಸಿದೆ, ಸೊಬಗಿದೆ ಎಂದು ನಮ್ಮ ಕವಿಯೊಬ್ಬರು ಕಬ್ಬನ್ ಪಾರ್ಕ್‌ನಲ್ಲಿ ಪಲುಕುತಿದ್ದರು.

—ಪಾರ್ಕಿನ ಅಂಚಿನಲ್ಲಿ ಕಡಲೆಕಾಯಿ ಮಾರೋಳು ಸಿಕ್ಕಾಗ ಕವಿಗಳು ಕಾದಿದ್ದಾರೆ ಅಂದಾಗ, ಮೂರು ದಿನದಿಂದ ಸಾಲ ತೊಗೊಂಡಿದಾರೆ, ಇವತ್ತೂ ಕೇಳ್ತಾರು–ಅತ್ತ ಹೋಗೋದೇ ಇಲ್ಲ ಬುದ್ದಿ ಎಂದುಬಿಡೋದೆ!

ಕೊಲ್ಲಾಜನ್ ಎನ್ನುವುದು....

ಕೇಳಿಹಿರಿ ನೀವೆಲ್ಲ ಕೊಲ್ಲಾಜನ್ ಎನ್ನುವುದು


[ನೀವಂತು ಶ್ರೀಯುತ ಮಹಾಶಯರು ನಿಮಗೇಕೆ
ನಿಮ್ಮೆಲ್ಲ ಚಿಂತೆಯೂ ಹಕ್ಕಿಯದೆ ಕ್ರಿಮಿಚಿಂತೆ
ನಾನೊ ಬಾಡಿಗೆಮನೆಯ ಗೋಡೆಯಡಿ ಮಲಗಿದ್ದೆ]
ಬಹುಮುಖ್ಯ ಪ್ರೋಟೀನು ಅದರ ಕಣಗಳ ರಚನೆ
ವಿಜ್ಞಾನಿಗಳಿಗೆಲ್ಲ ಧೋಕಾ ಹೊಡೆಸುತ್ತಲಿತ್ತು
ನ್ಯೂಕ್ಲಿಯಸ್ಸಿನ ಸುತ್ತ ವಿದ್ಯುದಣುಗಳ ಮೊತ್ತ
ಬೆಳಕು ಅಲೆಗಳ ಚಲನೆ ಕ್ವಾಂಟಮ್ಮು ಆಗಾಗ
ಎಲ್ಲವೂ ತಿಳಿದಾಯ್ತು ಎನ್ನುವ ಅಹಂಕಾರ ಚಿತ್ತ
ಯುಕ್ತರಿಗೆಲ್ಲ ಲತ್ತೆಯನು ಕೊಟ್ಟಿತ್ತು

ಮೊನ್ನೆ ಯಾರೊ ಮುಖರ್ಜಿ ಗುಜರಾಯಿಸಿದನರ್ಜಿ
ಧಣಿಯೆ ಕ್ಯಾನ್ಸರ್ ರೋಗ ಗುಣಪಡಿಸೆ ನಾ ಬಲ್ಲೆ
ಇನ್ನೊಬ್ಬ ಕಿಡ್ನಿಯನೆ ಕಿತ್ತ [ಧಣಿಗಳ ಚಿತ್ತ
ತಿಳಿದೆ ಇರಬಹುದದನು] ಯಾರೊ ರಷ್ಯದೊಳತ್ತ
ಸತ್ತ ಹಲ್ಲಿಗಳ ಚಿಂತೆಯ ಬಿಡಿಸಿ ಮೇಲೆತ್ತಿ
ಐದು ಸಾವಿರ ವರ್ಷ ನಿದ್ದೆ ಹೊಡೆಯುತ್ತಿದ್ದು
ಇಂದೀಗ ಕ್ರಾಂತಿಸುಖ ಅನುಭವಿಸಲೆಂದೆದ್ದು
ಬಂದವೆಂದರು [ತಾವು ಕೇಳಿದಿರಿ ಅದನೆಲ್ಲ
ನಾನೊ ಚಿಟಕಿಯ ಹೊಡೆದು ಆಕಳಿಸಿ ಒರಗಿದ್ದೆ
ಐದು ಸಾವಿರವೇಕೆ ಏಕೆ ಎಂಟಲ್ಲ
ಹೇಗೆ ನಂಬುವುದಿದನು ಬಿಟ್ಟೆ ಗಂಟಲ್ಲ
ಎಂದು ತಾವೆನಲಿಲ್ಲ ತಮಗೆ ಬೇಕಿಲ್ಲ]

ಲೋಕ ಕಲ್ಯಾಣಕ್ಕೆ ಯಾರು ಕರ್ತರು ಅವರ
ಹೃದಯದಲಿ ಸತ್ಯ ದಯೆ ಮೆದುಳಿನಲ್ಲಿ ಬುದ್ಧಿ ಕಣ
ಇರುವುದೋ ಇಲ್ಲವೊ ಎಂಬ ಪ್ರಶ್ನೆಗೆ ಇಂದು

ಸಿಖರದುತ್ತರ ಸಿಗುವುದದರ ಬಿತ್ತರ ದಳಲಿ ಕೋಟ್ಯಂಶ
ದೊಳಗೊಂದು ಭಾಗವನು ಬಿಡಗೊಡದೆ ಅಳೆಯಬಲ್ಲರು
ತಂದು ಲೇಸರನು ಮೇಸರನು ಕೆಟ್ಟ ಚಾಳಿಯು
ಬಿಟ್ಟು ಕೊಟ್ಟ ಮಾತಿಗೆ ತಪ್ಪಿ ಕುಣಿದಲ್ಲ ಜನಗಳನು
ಕೊಲ್ಲುವುದು ಮೃತ್ಯುವಿನ ಕಿರಣ ದೇವರ ಕರುಣ ಇಲ್ಲವದಕೆ

ಮಳೆ ಚಚ್ಚಿ ಹೊಳೆ ಹೆಚ್ಚಿ ಬುಡವೆ ಕೀಳುವಹೊತ್ತು
ಆದರೂ ಅಲ್ಲಿಲ್ಲ ವಿಜ್ಞಾನಿಗಳ ಗತ್ತು ಶತಮಾನದಂತ್ಯಕ್ಕೆ
ಜೀವ ಶಾಸ್ತ್ರವೆ ರಾಜ ಜೀವನದ ಗತಿಗುರಿಯೆ
ಬದಲಾಯ್ತು ಇದು ಸಾಜ
ಜೀವ ಕಣಗಳ ರಚನೆ ನಡೆನುಡಿಯು ಮಸಲತ್ತು
ಗತ್ತು ಜೀವನದೋಘ ಜೀವಿಗಳ ಗಡಬಿಡಿಯು
ರೂಪಿಸುವುದಿನ್ನು ವುದೆ ಸಂದೇಶ ಈಹೊತ್ತು.
ಯಾರೋ ಯೂಕೆಯ ಹುಡುಗ ಪುಷ್ಪಕುಂಡದ ಚಿತ್ರ
ಮುಂದಿಟ್ಟು ಜೀವಕಣ ರಚನೆ ಇಂತು ವಿಚಿತ್ರ
ವೆಂದ ಕೇಳಿದೆ ನಾನು ಪದವ ಹೇಳಿದೆ ಕುಣಿದು.



ಕಣ ಕಣದ ರಚನೆಯುಲಿ ವಿವಿಧ ಚಿತ್ರ ರಹಸ್ಯ
ಕೊಲ್ಲಾಜನ್ ಕಣದೊಳಗೆ ತಂತಿ ಬೇಲಿಯ ಮೇಲೆ
ಕಾಲ ಕೀಳ್ಬೊಗಮಾಡಿ ಕಪ್ಪೆಲಾಟದ ಲಾಗ
[Triple helical coiled coil
ಅಜ್ಞಾನಿಗಳಿಗೆ ಮಿದುಳಿನ ಬಾಯಿಲ್]

ಕೆಲ ಓತಿಕ್ಯಾತಗಳು ಮಿದುಳಿನಲಿ ಹಲರೀತಿ
ಕೈಕಾಲು ಗುಲ್ಮ ವಪೆ ನರನಾಡಿ ಜಠರರಸ
ಒಂದೊಂದ ರೊಳಗೊಂದು ತೆರ ಕುಣಿದು ಕುಪ್ಪಳಿಸಿ
ನಾನು ಗೋಡೆಯ ಹಿಂದೆ ಬೀಡಿ ಸೇದುವುದನೂ



ನೀವು ಕಳ್ಳಂಗಡಿಯು ಗಾನ ಪಾಡುವುದನ್ನೂ 'ಇದು
ಹೀಗೇ ಸರಿ' ಎಂದು ನಿರ್ಧರಿಸುತ್ತಿಹವಂತೆ.

ಸರ್ಕಾರ ದೊಳ ಜನರ ಆಪೊಸಿಷನ್ ಪ್ರಭೃತಿಗಳ
ಕ್ರುಶ್ಚೇವ, ಕೆನ್ನೆಡಿ, ನಸೆರ್, ಮೆಕರಿಯೋಸುಗಳ
ನೂರೊಂದ, ಜಾಫರ್, ಗುಲಾಂ, ಗೌಸು, ಹೊನ್ನೂರ,
ಜಕರಿಯ, ಕುವೆಂಪು, ಜೀವಾನಂದರೆಲ್ಲರಲೂ ಈ
ಜೀವಕಣದ ಪ್ರಕ್ರಿಯೆಯಾಟ ಸರ್ವೇಸಮಸ್ತ
ವ್ಯಾಪಾರಗಳ ನಿರ್ಧರಿಸುತಿಹುದಂತೆ

[ಅಲ್ಲವೆಂಬೆನೆ ಬಾಯಿ ಬಂದು ನಾಲಿಗೆ ಸ್ತಬ್ಧ
ಹೌದೆ? ಹೇಳುವುದೆಂತು ನನ್ನಂಥ ಮುಗ್ಧ]

ಜ್ಞಾನವರ್ಧನೆ ಕೋಟಿಯೊಳಗೊಂದು ಅಂಶ
ದುಃಖವರ್ಧನೆ ಏಕ ಖರ್ವ ಪ್ರಮಾಣ
ಸತ್ಯವನು ಶ್ರೀ ಹರಿಯೇ ಬಲ್ಲ.

*　*　*　*

ಆದಕೆಂದೆ ಮಧುಮಾಸ ಮರಳಿ ಬಂದರು ನಾನು
ಕುರಿತದನು ಗೀತೆಯನು ರಚಿಸಲಿಲ್ಲ
ಪ್ರೇಮ ಪ್ರಶಂಶೆ ಮಾಂದಳಿರು ದುಂಬಿಯು ಗೀತೆ
ಗಳಲಿ ನಡೆದರು ಮನಕೆ ರುಚಿಸಲಿಲ್ಲ.

—ಕವಿಕುಲಲಾಮ.

— ಬ್ಲಡ್ - ಪ್ರೆಸರ್ —

ನಮ್ಮ ಮನೋಹರು ತರಹ ಇರಬೇಕು, ನಮ್ಮ ಸರ್ಕಾರ ಏನು ಮಾಡಿದರೂ ಅವನ ತಥಹಾ ಸಮಾಧಾನದಿಂದ, ಎಗರಾಡದೆ ಮಾತಾಡದೆ ಮಾಡಬೇಕು. ಅದು ಬಿಟ್ಟು ಬಿಟ್ಟು ಹೀಗೆ ಮಾಡ್ತೀವಿ, ಹಾಗೆ ಹೊಡೀತೀವಿ ಅಂತ ಬೊಬ್ಬೆ ಬಾರಿಸ್ತಾ, ಇದ್ದ ನರಾನೆಲ್ಲಾ ಕಿತ್ತು ಕೂಗುತ್ತಾ ಇದ್ದರೆ ಬ್ಲಡ್ ಪ್ರೆಸರ್ ಹೆಚ್ಚಾಗುತ್ತೆ. ಲಕ್ವಾ ಹೊಡೆದರೂ ಹೊಡಿಯಬಹುದು" ಎಂದ ಅರವಾಮುದ್ದು, ಆ ಸಂಜೆ ಕ್ಲಬ್ಬಿನಲ್ಲಿ. ಕಾಮನ ಹಬ್ಬದ ಸಂಜೆ

"ಯಾರೋ ನಿಮ್ಮ ಮನೋಹರು! ಅಂತಹ ಸ್ಥಿತ ಪ್ರಜ್ಞ. ಏನು ಮಾಡಿದರೂ ಸಮಾಧಾನದಿಂದ ಮಾಡೋ ಬಡ್ಡೀ! ಕಳ್ಳತನ ಛಪಾವಣೆ, ಖೂನಿ ಇವುಗಳನ್ನು ಕೂಡ ಸಾವಧಾನವಾಗಿ ಮಾಡಿದನೇನೋ ಅವ. ಅವನ ಹೆಸರು ಕೇಳೇ ಇಲ್ಲವಲ್ಲೋ? ನಿನ್ನ ಭಾವಮೈದ ಗೀವ ಮೈದನೇನೋ?" ಎಂದು ಆದರದಿಂದ ಕೊರವ ಪ್ರಶ್ನೆ ಹಾಕಿದ.

"ನಿನಗೆ ಹೇಗೆ ಗೊತ್ತಾಯ್ತೋ ನನ್ನ ಭಾವಮೈದ ಅಂತ" ಅರವಾ ಮುದ್ದು ಬಾಯಗಲಿಸಿದ, ಆಶ್ಚರ್ಯದಿಂದ

"ಸಾವಧಾನವಾಗಿ, ಸಮಾಧಾನದಿಂದ, ಕಳ್ಳತನ ಛಪಾವಣೆ ಇತ್ಯಾದಿಗಳನ್ನು ಮಾಡುವ ಗಂಡು ಸಾಮಾನ್ಯವಾಗಿ ಹೆಣ್ಣಿನ ಬೆನ್ನಲ್ಲಿ ಬಿದ್ದವನೇ ಆಗಿರಬೇಕು ಆ ಧೈರ್ಯದಿಂದಲೇ ಹಾಗೆ ಶಾಂತಚಿತ್ತನಾಗಿ ಖೂನಿ ದರೋಡೆ ಮಾಡಲು ಸಾಧ್ಯ" ಎಂದು ವಿವರಣೆ ಇತ್ತ ಕೊರವ.

ನನಗೇಕೋ ರೇಗಿಹೋಯಿತು. ನಮ್ಮ ರಾಷ್ಟ್ರದ ರಕ್ಷಣೆಯನ್ನು ಹೇಗೆ ಮಾಡಬೇಕು ಅಂತ ಯೋಚಿಸಲು ಶುರು ಮಾಡಿದ ಅರವಾಮುದ್ದು, ಅವನ ಭಾವ ಮೈದನ ವರ್ಣನೆಗೆ ಇಳಿದರೆ ಇಳಿದು ಅಲ್ಲೇ ಮಾತಿಗೆ ತುಂಡು ಹಾಕಿದರೆ, ಏನು ಮಾಡಿದಹಾಗಾಯ್ತು. "ಲೇ ಅರವಾಮೊದ್ದು! ನಮ್ಮ ಸರ್ಕಾರಾನ ಟೀಕೆ ಮಾಡಿದೆ ಯಲ್ಲ ಮನೋಹರು ತರಹಾ ಮಾಡಲಿಲ್ಲ ಅಂತ, ನಿನ್ನ ಆ ಭಾವಮೈದ ಏನೋ ಅಂತಾ ಸಾಹಸಾನ ಕಿಸಿದಿದ್ದು!" ಎಂದು ರೇಗುತ್ತಾ ಜಡಾಯಿಸಿದೆ

"ಅದನ್ನೇ ಹೇಳುಕ್ಕೆ ಹೋಗ್ತಿದ್ದೆ ಕಣೋ! ಅಷ್ಟರಲ್ಲೇ ಈ ಕೊರವ, ಅವ ನಿನ್ನ ಭಾವಮೈದನೇ ಎಂದುಬಿಟ್ಟ. ಮಾತು ಭಾವಮೈದನ ಹಾಗೇ ಅಡ್ಡ ಹಾದಿ ಹಿಡೀತು. ಅದಕ್ಕೆ ಯಾಕೆ ರೇಗ್ತೀಯೋ? ಹೇಳ್ತೀನಿ ಕೇಳು?"

ಮನೋಹರು ಸುಂಕದ ಆಫೀಸಿನಲ್ಲಿ ಇಂದಾ-ಗೆ ಕಾರಖೂನ ಆಗಿದ್ದ. ನೀನು ನೋಡಿತ್ತಿಲ್ಲ ಅವನನ್ನ. ಹತ್ತಿ, ಬೆಣ್ಣೆ ಬೆಕ್ಕಿನ ಬಾಲದ ಹಾಗೆ ಮೆದುವಾಗಿದ್ದ ಅದಕ್ಕೇ ಆ ಆಫೀಸಿನಲ್ಲಿ ಎಲ್ಲರೂ ಎಲ್ಲಾ ಕೆಲಸಕ್ಕೂ ಅವನನ್ನು ಬಳಸಿಕೊಳ್ಳುತ್ತಿದ್ದರು. ರಸೀತಿ ಎಂಟುಕೆ ಹೋದು, ಖಜಾನೆಗೆ ಹಣ ಕಟ್ಟುಬಿಟ್ಟು ಬರೋದು ಕಾಫಿ ತಿಂಡಿ ತಂದು ಕೊಡೋದು, ಅನ್ವಾರಿ ಕಾಕಾ ಹೋಟಲಿನಿಂದ ಬೀಡ ತಂದುಕೊಡೋದು, ಎಲ್ಲ ಕೆಲಸಕ್ಕೂ ಮನೋಹರೂನೇ ಮುಂದು.

ನಮ್ಮನೇಗೆ ಬಂದಾಗ ಮಾತ್ರ ನನ್ನಮೇಲೆ ಹತ್ತುಕೊಂಡು ದರ್ಬಾರ್ ಮಾಡೋದನ್ನ ನೋಡಿದರೆ ಈ ಕ್ರೂರಪ್ರಾಣಿ ಆಫೀಸಿನಲ್ಲಿ ಇಷ್ಟು ಮೆದುವಾಗಿ ಹೊಸಿಲಮುಂದಿನ ಗೋಣಿ ಚೀಲದಂತೆ ಇರ್ತಾನೆ ಅಂತ ನಂಬಿಕೇನೇ ಬರ್‍ತಿತ್ತಿಲ್ಲ

ಇಂತಹ ಸಾಧುಪ್ರಾಣಿ, ಸುಂಕದ ಆಫೀಸಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಛಪಾವಣೆ ಮಾಡಿದ್ದಾನೆ ಎಂದು ಸುದ್ದಿ ಹರಡಿದಾಗ, ಅಂತಹ ಛಪಾವಣೇನ ಮೂರು ವರ್ಷಗಳಿಂದ ಮಾಡ್ತಾ ಇದ್ದ ಅಂತ ತಿಳಿದುಬಂದಾಗ ಊರ ಪೋಲೀಸ್ ಕಮಿಷನರಿಗೆ ಬಲು ಕೋಪ ಬಂದು ಬಿಡ್ತು. ಸುಂಕದ ಆಫೀಸಿನಲ್ಲಿ ಅವರು ಎರಡು ವರ್ಷ ಹಿರಿಯಧಿಕಾರಿಗಳಾಗಿ ಕೆಲಸ ಮಾಡಿ, ಹಿಂದಿನ ವರ್ಷ ತಾನೇ ಪೋಲೀಸ್ ಕಮಿಷನರ್ ಆಗಿ ಭಡ್ತಿ ಪಡೆದು ಹೋಗಿದ್ದರು. ಅವರ ಕಾಲದಲ್ಲಿ ಇಷ್ಟು ಛಪಾವಣೆ ಆಯ್ತು ಅಂತ ಸುದ್ದಿ ಹೊರಬಿದ್ದರೆ, ಅವರ ಮಾನಕ್ಕೆ ಕುಂದು. ಅದಕ್ಕೇ ಬಹಳ ಕೋಪಾ ಬಂದು, ಅವರೇ ಮನೋಹರೂನ ಖುದ್ದಾಗಿ ಅರೆಸ್ಟ್ ಮಾಡಿದರು. ಸೆರೆಮನೆಗೆ ಕರಕೊಂಡು ಹೊರಡಬೇಕು. ಆಗ ಮನೋಹರು "ಸಾರ್! ಒಂದು ನಿಮಿಷ ದೇಹಬಾಧೆ ತೀರಿಸ್ಕೊಬೇಕು ಅನ್ವಾರಿ ಹೋಟಲಿನಿಂದ ಇವತ್ತುಬೀಡಾ ತರೋವಾಗ ಕಾಕಾ ಛಹಾ ಕೊಟ್ಟ. ಅದನ್ನು ಕುಡಿದ ಆವಾಗಿನಿಂದ ಮೂರು ಮೂರು ನಿಮಿಷಕ್ಕೆ ....

........ಸ್ಯಾರ್ ಅಂದ ಕೀರಲ ದನಿಯಲ್ಲಿ.

ಪೋಲೀಸ್ ಕಮಿಷನ್ನರು ಅವನ ಮುಖ ನೋಡಿದರು. ಉಟ್ಟಿದ್ದ ಪಂಚೇನ ಎಲ್ಲಿ ನೆನಸಿಕೊಂಡು ಬಿಡ್ತಾನೋ ಅಂತ ಅವರಿಗೂ ಹೆದರಿಕೆ ಹುಟ್ಟಿರಬೇಕು.

"ಬಾ! ನಾನೂ ಬರ್ತೀನಿ" ಅಂತ ಅವನನ್ನು ಕರ್ಕೊಂಡು ಕಚೇರಿ ಹಿಂದುಗಡೆ ಇದ್ದ "ಗಂಡಸರು" ಅಂತ ತೂಗು ಹಲಗೆ ಇದ್ದಲ್ಲಿಗೆ ಹೋದರು.

ಮನೋಹರು ಒಳಕ್ಕೆ ಹೋದ. ಕಮಿಷನರು ಮೂರು ಜನ ಕನಿಷ್ಟಬಿಲ್ಲೆಗಳೊಡನೆ ಹೊರಗೆ ಕಾವಲು ಕಾಯ್ತಾ ಇದ್ದರು.

"ಎರಡು ನಿಮಿಷ ಆಯಿತಲ್ಲೋ ಬೇಗ ಬಾ" ಅಂದರು ಕಮಿಷನರು "ಏನೋ! ಕಾಕಾ ಹೋಟಲಿಲ್ಲ ಏನ ಮಾಡಿಕೊಂಡು ಬಂದನೋ! ಇಷ್ಟು ಹೊತ್ತು ಮಾಡ್ತಾ ಇದಾನೆ" ಎಂದ ಒಬ್ಬ ಕನಿಷ್ಠ ಬಿಲ್ಲು. ಸ್ವಾನುಭವಿ.

ನಾಲ್ಕು ನಿಮಿಷ ಆಯ್ತು . ಕಮಿಷನರ್ರಿಗೆ ತಡೆಯಲಾಗಲಿಲ್ಲ. ಏನೊ, ಅನುಮಾನ ಬಂತು "ಗಂಡಸರು" ಅಂತಿದ್ದ ಬೋರ್ಡನ್ನು ನೋಡಿದರೂ ಅಲಕ್ಷ್ಯ ಮಾಡಿ ಒಳಕ್ಕೆ ನುಗ್ಗಿದರು. ಒಳಗೋಡೆಯ ಮೊಳೆಯ ಮೇಲೆ ಒಂದು ಪಂಚೆ ಹಾಕಿದೆ. ಮನೋಹರು ಮಾಯವಾಗಿದ್ದ.

"ಹಿಂದಿನ ಗೋಡೆ ಎಂಟಡಿ ಎತ್ತರ ಇದೆ, ಈ ಕುಳ್ಳ ಅದು ಹ್ಯಾಗಾದರೂ ಛಂಗಿ ಹಾರಿ ಹೋದ!" ಅಂತ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾ ಪರಾರಿಯಾದ ಆಸಾಮಿಯ, ಸಿಕ್ಕಷ್ಟು ಪಂಚೆಯನ್ನೇ ಅರೆಸ್ಟ್ ಮಾಡಿ" ಅಪರಾಧಿಯನ್ನು ಯಥಾಶಕ್ತಿ ಅರೆಸ್ಟ್ ಮಾಡಿದ್ದೇನೆ" ಎಂದು ಸಮಾಧಾನ ತಂದುಕೊಂಡು ಕಮಿಷನರು ವಾಪಸು ಬಂದರು.

ಈ ತಹಲ್‌ವರೆಗೂ ಮನೋಹರು ಸುಳಿವೇ ಇಲ್ಲ ಎಂದು ಮುಗಿಸಿದ ಅರವಾಮೊದ್ದು.

"ಅದಕ್ಕೂ, ನಮ್ಮ ರಾಷ್ಟ್ರ ರಕ್ಷಣೆಗೂ ಏನು ಸಂಬಂಧವೋ?" ಎಂದು ಕೇಳಿದೆ.

"ಹೊರಗಡೆ ನಾಲ್ಕು ಜನ ಪೋಲೀಸಿನವರು ಕಾವಲು ಕಾದಿರೋವಾಗ, ಸಾವಧಾನವಾಗಿ ಯೋಚಿಸಿ, ಒಂದು ಮಾತಾಡದೆ ಕಿಮುಕ್ ಕಮುಕ್ ಅನ್ನದೆ, ಎತ್ತರದ ಗೋಡೆ ಹಾರಿ ಪರಾರಿಯಾದನಲ್ಲ. ನಮ್ಮ ಮನೋಹರು. ಅಂತಹ ಸಂಕಷ್ಟ ಸಮಯದಲ್ಲೂ ಕೂಡ, ಹೊರಗೆ ಕಾದಿರೋರು ಬರೀ ಕೈಯಲ್ಲಿ ಹೋಗಬೇಕಾಗುತ್ತಲ್ಲ ಅಂತ ಉಟ್ಟ ಪಂಚೇನ್ನೆ ಅವರಿಗೆ ಬಿಟ್ಟು ಹೋದನಲ್ಲ! ಹಾಗೆ ಸಮಾಧಾನ ಚಿತ್ತದಿಂದ, ಪಂಚಶೀಲಕ್ಕೆ ಅನ್ವಯಿಸುವಂತೆ, ನಮ್ಮ ಸರ್ಕಾರದೋರು ಮಾತಾಡದೆ ಕೆಲಸಮಾಡಬೇಕು ಅಂತಂದೆ. ಸುಮ್ಮನೆ ರೇಗಿ, ನಮಗೆ ಅನ್ಯಾಯ ಮಾಡಿದರು, ಮೋಸ ಮಾಡಿದರು 'ನಾಚಿಕೆಯಿಲ್ಲ ಅವರಿಗೆ ಅಂತ ನಾವು ಎಗರಾಡಿದರೆ, ನಮಗೆ ರಕ್ತದ ಒತ್ತಡ ಬರುತ್ತೇ ಹೊರ್ತು ನಾಚಿಕೆ ಅವರ ಮೈ ಮುಚ್ಚುತ್ತೇ" ಎಂದ ಅರವಾಮೊದ್ದು.

"ನೋಡಿದೆಯೇನೋ! ರಾಷ್ಟ್ರಕ್ಕೆ ಕಷ್ಟ ಬಂತು ಅಂದರೆ, ಅರವಾಮೊದ್ದು ಕೂಡ ಎಷ್ಟು ಮುದ್ದು ಮುದ್ದಾಗಿ ಮಾತಾಡ್ತಾನೆ" ಎಂದು ಕೊರವ ಹುಬ್ಬು ಹಾರಿಸಿದ.

“ಇಷ್ಟೆಲ್ಲಾ ಮಾಡಿದವಲ್ಲಪ್ಪ ನಿಮ್ಮ ಮನೋಹರು, ಅವನಿಗೇನಾದರೂ ರಕ್ತದ ಒತ್ತಡ ಇತ್ತೇ? ಮೂರು ವರ್ಷದಿಂದ ಥಪಾವಣೆ ನಡೆಸಿ, ಎಂದಾದರೂ ಸಿಕ್ಕಿ ಹಾಕಿಕೊಳುತ್ತೇನೆ ಎಂದು ಸಂಶಯ ಇದ್ದ ಅವನಿಗೆ ರಕ್ತದ ಒತ್ತಡ ಬಂದೇ ಇದ್ದಿರಬೇಕು. ತಾಪತ್ರಯ, ಕಿರಿಕಿರಿ, ಅಪರಾಧಿ ಭಾವನೆ ಇವುಗಳಿಂದ ರಕ್ತದ ಒತ್ತಡ ಬರ[illegible]ತ ನ[illegible] ಡಾಕ್ಟರು ಹೇಳ್ತಾನೇ ಇರ್ತಾರೆ” ಎಂದೆ

*   *   *   *

“ನಿನಗೆ ನೂರು ವರ್ಷ ಆಯಸ್ಸು ಕಣಯ್ಯಾ!” ಅಂದ ಕೊರವ. ಹಿಂತಿರುಗಿದೆ. ನಮ್ಮ ಡಾಕ್ಟರೇ ಬಂದಿದ್ದರು.

“ನಿನ್ನ ಮಾತೇ ಬಂದಿತ್ತು.—ಮನೋಹರು ಥಪಾವಣೆಮಾಡಿ ಓಡಿಹೋಗಲಿಲ್ಲವೇ! ಅವನಿಗೆ ರಕ್ತದ ಒತ್ತಡ ಇದ್ದಿರಬೇಕು ಅಷ್ಟೆಲ್ಲಾ ತಾಪತ್ರಯ, ಫಿಕಿರಿ ತುಂಬಿತ್ತು ಅವನಿಗೆ ಹಾಗನ್ನೋ ಹೊತ್ತಿಗೆ ನೀನೆ ಪ್ರತ್ಯಕ್ಷನಾದೆ. ಖಂಡಿತವಾಗಲೂ ಪಿಸೂ ಮಾಡಬೇಡ ಡಾಕ್ಟರ್, ನೀನು ಬೇಗ ಸಾಯೋದೇ ಇಲ್ಲ” ಎಂದ ಕೊರವ

“ಯಾವ ಮನೋಹರು! ನಮ್ಮ ಅರವಾವೊದ್ದು ಡಬ್ಲ್ಯು ಬೈ ಟೂ ನೇ ಅಂದರು ಡಾಕ್ಟರು

“ಹ್ಞ” ಅಂತ ನಾನು ತಲೆಯಾಡಿಸಿದೆ.

ಅವನು ಪರಾರಿಯಾಗೋಕ್ಕೆ ಮೂರು ವರ್ಷಗಳ ಹಿಂದಿನಿಂದ ನನ್ನ ಹತ್ತಿರ ಔಷಧ ಪಥ್ಯಕ್ಕೆ ಬರ್ತಿದ್ದ ಅಜೀರ್ಣ, ಕಥೇರೀಲಿ ಜೋಂಪು ಬರುತ್ತೆ, ತಲೆ ಕೆರೆದುಕೊಂಡರ ಕೂದಲು ಕೈಗೆ ಬರುತ್ತೆ, ಅಂಗೈ ನವೆ ಆಗುತ್ತೆ, ಅಂತ ಏನೇನೋ ರೋಗದ ಚಿಹ್ನೆಗಳನ್ನು ಹೇಳಿಕೊಳ್ಳುತ್ತಿದ್ದ. ಎಲ್ಲಾ ಈ ಚಿಹ್ನೆಗಳೂ ಸುಂಕದ ಕಚೇರಿಲಿ ವಾಡಿಕೆಯಾದುವೇ ಹೊರತು, ಖಾಯಿಲೆ ಅಂತ ಹೆಸರಿಡೋ ಅಷ್ಟು ಉಲ್ಬಣವಾದದ್ದಲ್ಲ ಹಾಗಾಗಿ, ಹೆಚ್ಚಾಗಿ ಮಿಕ್ಶರೋ ಔಷಧೀನ ಅವನಿಗೆ ಹುಯ್ದು ಕೊಡೋ ಮೊದಲು, ಥರ್ಮಾಮೀಟರ್ ಹಾಕಿ ಜ್ವರ ನೋಡಿ, ಗಡಿಯಾರ ಹಿಡಿದು ನಾಡಿ ನೋಡಿ, ರಕ್ತದ ಒತ್ತಡಾನೂ ನೋಡ್ತಾ ಇದ್ದೆ.

ಸಿಸ್ಟಾಲಿಕ್ ೯೦–೧೦೦, ಡಯಸ್ಟಾಲಿಕ್ ೪೦–೫೦. ಇಷ್ಟರಲ್ಲೇ ಇರ್ತಿತ್ತು. ನಿಮಗೆ ಬ್ಲಡ್ ಪ್ರೆಷರ್ ಬಹಳ ಕಡಿಮೆ ಅದಕ್ಕೆ ಈ ಖಾಯಿಲೆಯೆಲ್ಲಾ. “ತಲೆಗಿಲೆ ಏನಾದರೂ ಸುತ್ತೋದು ಉಂಟೆ” ಎಂದು ಕೇಳಿದರೆ; ಇಲ್ಲವಲ್ಲಾ! ನನ್ನ ಹತ್ತಿರ ವಹಿವಾಟು ನಡೆಸಿಹೋದೋರು ತಲೆ ಮೇಲೆ ಕೈ ಇಟ್ಟುಕೊಂಡು ಹೋಗ್ತಿದ್ದರು ಅಂತಿದ್ದ. “ಕೈಕಾಲು ಸೋಲುತ್ತೈ? ಝೋಂಪು ಬಂದ ಹಾಗೆ ಆಗುತ್ತೈ” ಅಂತ

ಕೇಳಿದರೆ, "ಇಲ್ಲ—ಆದರೆ ಬೈಸಿಕಲ್ಲಿನ ಮೇಲೆ ಕಾಕಾ ಹೋಟಲಿಗೆ ಹೋಗಿ ಬರೋವಾಗ, ಆ ರಭಸಕ್ಕೋ ಏನೋ ಬೈಸಿಕಲ್ ಕಿರ್ ಕಿರ್ ಅಂತ ಒರಲುತ್ತೆ" ಅಂತಿದ್ದ.

ಅವನು ಅರೆಸ್ಟಾದ. ತಪ್ಪಿಸಿಕೊಂಡ ಅಂತ ತಿಳಿದಾಗ, ನನಗೆ ಬಲು ಆಶ್ಚರ್ಯವಾಯಿತು. ಇಷ್ಟು ಕಡಿಮೆ ರಕ್ತದ ಒತ್ತಡ ಇದ್ದವನು ಇಷ್ಟನ್ನೆಲ್ಲಾ ಹೇಗೆ ಸಮಾಧಾನಚಿತ್ತದಿಂದ, ನಿರ್ಲಿಪ್ತನಂತೆ, ಸ್ಥಿರಪ್ರಜ್ಞನಂತೆ ಸಾಧಿಸಿದ? ಅಂಬೋದು ಈಗಲೂ ನನಗೆ ಮೋಜಾಗಿ ಕಾಣಿಸ್ತದೆ.

"ಆದರೆ ಅವಾಗಿನಿಂದ ಒಂದು ಪಾಠ ಕಲಿತೀನಿ. ಯಾರ್ಯಾದರೂ ರೋಗಿ ಬಂದರೆ, ಅವರು ಚೆನ್ನಾಗಿದೀನಿ ಅಂದಾಗ, ಅವರ ರಕ್ತದ ಒತ್ತಡ ಎಷ್ಟೇ ಹೆಚ್ಚಿರಲಿ, ಎಷ್ಟೇ ಕಡಿಮೆಯಿರಲಿ, "ಇದು ನಿಮಗೆ ಸರಿಯಾಗಿದೆ" ಎಂದು ಸತ್ಯ ಹೇಳುವ ಅಭ್ಯಾಸ ಮಾಡಿಕೊಂಡಿದ್ದೀನಿ" ಎಂದರು ಡಾಕ್ಟರು.

* * * *

"ಎಂತಹ ಶಹಣೇನೋ ನಿನ್ನ ಭಾವನ್ಯೆದ, ಅವನ್ನ ಹೋತುಕೊಂಡಿದ್ದಾಳೇನೋ ನಿನ್ನ ಹೆಂಡತಿ" ಎಂದು ಅರವಾ ಮುದ್ದೂನ ಕೇಳಿದೆ.

"ಅದಕ್ಕೇ ಕಣೋ ನಾನು ಹೀಗಿರೋದು. ಆದರೂ ಅಷ್ಟೇನೂ ಬಾಧಕವಿಲ್ಲ ಅನ್ನು. ಯಾವು ಯಾವುದೋ ಊರಿನಿಂದ, ಆಗಿಂದಾಗ್ಗೆ ಇವಳಿಗೆ ತುಂಬು ಮನಿ ಆರ್ಡರ್ ಬರುತ್ತೆ. ಮನೋಹರು ಎಲ್ಲಿಂದಲೋ ಕಳ್ಸಿದ್ದಾನೆ ಅಂದರೆ ತಮ್ಮ ಅಂದರೆ ಹಾಗಿರಬೇಕು, ವಿಶ್ವಾಸ ಅಂದರೆ ಹಾಗೆ ಮರೆತೇ ಇಲ್ಲ ನಮ್ಮನ್ನೆಲ್ಲ" ಎಂದು ಹೇಳ್ತಾ ಇರ್ತಾಳೆ. ಎಂದ ಅರವ ಮೊದ್ದು.

"ಹಬ್ಬ ಇವತ್ತು. ಆಚಾರ್ರು ಮನೆಗೆ ಬಂದಿರ್ತಾರೆ. ಬೇಗ ಮನೆಗೆ ಹೋಗದೆ ಇದ್ದರೆ ನಾನು ಕಾಮನ ಹಬ್ಬ ಮಾಡಬೇಕಾಗುತ್ತೆ." ಅಂತ ಹೇಳುತ್ತಾ ಮನೆಗೆ ಹಿಂತಿರುಗಿದೆ.

ತಿರುಪತಿಯ ಸೋಮುವಿಗೆ ಬಾಯ್ತುಂಬ ಉಗ್ಗು
ಪ್ರತಿದಿನವು ಕೂದಲನು ಕೂಡಿಡುವ ಗುಗ್ಗು
ಬೆರಳ ಮೂಗಿಗೆ ತಂದು
"ಯಾತಕ್ಕೊ ಇದು" ಎಂದು
ಕೇಳಲುತ್ತರಿಸುವನು ರರ್ರರ್ರರಗ್ಗು !

—ಬಿಳಿಗಿರಿ

ಆಯೂಬರ ಆದರ್ಶ

ಒಂದಾನೊಂದು ಕಾಲದಲ್ಲಿ ಕೊರವಂಜಿಯಲ್ಲಿ ಒಂದು ವ್ಯಂಗ್ಯ ಚಿತ್ರ ಕಂಡ ಹಾಗೆ ಜ್ಞಾಪಕ. ಆಯುಸ್ಕರ್ಮ ಶಾಲೆಯಲ್ಲಿ ಹಜಾಮ ಕತ್ತರಿ ಹಿಡಿದು ತನಗೆ ತಲೆಕೊಟ್ಟು ಕುಳಿತ ಆಸಾಮಿಯನ್ನು ಕೇಳುತ್ತಾನೆ "ಹೇಗೆ ಮಾಡಲಿ ಸಾರ್ ?" ಎಂದು.

ಅದಕ್ಕೆ ಆ ಘಾಟಿ ಆಸಾಮಿಯ ಉತ್ತರ ಗೊತ್ತೆ? "ಬಾಯಿ ಮುಚ್ಚಿಕೊಂಡು" ಎಂದು ! ನಮಗೆಲ್ಲ ಇದೊಂದು ಸೊಗಸಾದ ಜೋಕು. ಆದರೆ ಪಾಕಿಸ್ಥಾನದ ಆಯೂಬರಿಗೆ ಈ ಜೋಕು ಅರ್ಥವಿಲ್ಲದ್ದಾಗಿ ಕಾಣಬಹುದು. ಏಕೆಂದರೆ ಅವರ ಅಭಿಪ್ರಾಯದಲ್ಲಿ ನಾಪಿತನೆಂದರೆ ಅವರಿಗೆ ಸಾರ್ವಜನಿಕ ಸಂಪರ್ಕಾಧಿಕಾರಿಗಳಿದ್ದಂತೆ. ರಾಷ್ಟ್ರದ ವಿದ್ಯಮಾನಗಳನ್ನೆಲ್ಲ ತಮ್ಮ ಹಜಾಮನಿಂದಲೇ ಅರಿತುಕೊಳ್ಳುತ್ತೇನೆ ಎಂದು ಅವರು ಮೊನ್ನೆ ಮೊನ್ನೆ ಹೇಳಿದರು. (ಆದ್ದರಿಂದಲೇ ಅವರ ರಾಜಕೀಯ ನೀತಿ ಹಾಗಿದೆ ಎಂದು ಕುಹಕವಾಡಿದರು. ಆಡಿಕೊಳ್ಳಲಿ)

ನಮ್ಮ ಭಾರತಮಾತಾ ಸೆಲೂನಿನ ಮೈಲೇರುವಿಗೆ ಆಯೂಬರ ಅಭಿಪ್ರಾಯ ಕೇಳಿ ಹೆಮ್ಮೆಯೇ ಹೆಮ್ಮೆ. ಆತ ಕೈಯಲ್ಲಿ ಮಶೀನು ಕಟಕಟಿಸುತ್ತ ಅದರ ಹಿಮ್ಮೇಳಕ್ಕೆ ಸರಿಯಾಗಿ ವೀಳ್ಯ ತುಂಬಿದ್ದ ಬಾಯಲ್ಲಿ ವಟಗುಟ್ಟುತ್ತ ತನ್ನ ರಾಜಕೀಯ ಜ್ಞಾನವನ್ನು ಪ್ರದರ್ಶಿಸತೊಡಗಿದಾಗಲೆಲ್ಲ ನಾವು ಬಿಡದೆ ಪ್ರತಿಭಟಿಸುವುದಿತ್ತು. ಏಕೆಂದರೆ ಆತನು ಉದ್ವೇಗ ಅತಿಯಾದಾಗ ನನ್ನ ನೆತ್ತಿಯನ್ನು ಕುಕ್ಕಿದ್ದುಂಟು. ಕ್ಷೌರಕತ್ತಿಯನ್ನು ಬಲವಾಗಿ ಎಳೆದು ಗಾಯಮಾಡಿ ನೆತ್ತರು ಬರಿಸಿದ್ದುಂಟು. ಕೂದಲನ್ನು ಬಲವಾಗಿ ತೀಡಿ ಚಿತ್ರಹಿಂಸೆ ಮಾಡಿದ್ದುಂಟು.

ಮೊನ್ನೆ ಮೊನ್ನೆ ಹಾಗಾಯಿತು. ಚೀಣೀಯರು ಭೂಮಡಿಲಾಕ್ಕೆ ಬಂದರು ಎಂದು ಮೈಲೇರುವಿನ ರೇಡಿಯೋದಲ್ಲಿ ರೋಶಿ ಧ್ವನಿಯ ಕನ್ನಡ ಸುದ್ದಿ ಪ್ರಸಾರವಾಗುತ್ತಿತ್ತು. ಮೈಲೇರು ಆಗತಾನೆ ವೆಂಕಟೇಶಯ್ಯನವರ ಜುಟ್ಟು ಹಿಡಿದಿದ್ದ. ಸುದ್ದಿ ಕೇಳಿ ಆತ ಬಲು ರೇಗಿ "ಏನು ಮಾಡ್ತಿದಾರೆ ನಮ್ಮವರು ಚೀಣೀಯರು ಹಾಗೆ ನುಗ್ಗುತಿರೋವಾಗ ?" ಎಂದು ಅರ್ಭಟಿಸಿದ. ವೆಂಕಟೇಶ ಅಯ್ಯೋ ಎಂದು ಚೀರಿದರು. ಮೈಲೇರು ಸುದ್ದಿ ಕೇಳಿ ಅವರು ಹಾಗೆ ಚೀರಿದರೆಂದೇ ಭಾವಿಸಿದನೇ ಹೊರತು ತನ್ನ ಹಿಂಸೆಯಿಂದೆಂದು ತಿಳಿಯಲಿಲ್ಲ. ವೆಂಕಟೇಶಯ್ಯ ಮೈಲೇರುವಿನ ಕೈಯನ್ನು ಆಚೆ

ಕೊಡವಿ ಅವನ ಹಿಡಿತದಿಂದ ತಪ್ಪಿಸಿಕೊಳ್ಳಬೇಕಾಯಿತು. ಅಲ್ಲಿಂದ ಒಂದೇ ಓಟ ಓಡಿ ಮನೆ ಸೇರಿದರವರು.

ಇಂಥ ಅಪಾಯಗಳಿದ್ದರೂ ಮೈಲೇರುವಿನ ರಾಜಕೀಯ ಜ್ಞಾನ ಮೆಚ್ಚತಕ್ಕದ್ದೇ. ಆತ ರೇಡಿಯೋ ಹಾಗೂ ಪತ್ರಿಕೆಗಳಲ್ಲಿ ಬರುವ ಸುದ್ದಿಗಳನ್ನು ಎಡೆಬಿಡದೆ ಕಬಳಿಸುತ್ತಾನೆ. ಬಂದ ಬಂದವರೊಡನೆಲ್ಲ ಚರ್ಚೆ ಮಾಡುತ್ತಾನೆ. ಅವನ ರಾಜಕೀಯ ವಿಮರ್ಶೆಗಳಿಗೆ ಲಿಪ್‌ಮನ್ ಕೂಡ ತಲೆ ಬಾಗಬೇಕು.

ಈ ತುಲಾಭಾರದ ಚಿನ್ನ ಬೆಳ್ಳಿಯಿಂದ ಗನ್ನು ಟ್ಯಾಂಕು ವಿಮಾನಗಳನ್ನು ಕೊಂಡುಕೊಳ್ಳೋ ಬದಲಿಗೆ ಅವುಗಳನ್ನು ಚೀಣೀಯರ ಮುಂದೆ ಸುರಿದು ತಗೊಂಡು ನಡೀರಿ ಅನ್ನಬಾರದೆ?

ನಮ್ಮ ದೇಶದಲ್ಲಿ ಹೂತಿಟ್ಟ ನಿಧಿಗಳಿಗೆ ಕಡಿಮೆಯಿಲ್ಲ. ಶ್ಯಾಮಾ ಜೋಯಿಸರನ್ನು ಕರೆಕೊಂಡು ಹೋದರೆ ಅವುಗಳಿರುವ ಜಾಗಗಳನ್ನೆಲ್ಲ ತೋರಿಸಿಕೊಡುತ್ತಾರೆ. ಆ ನಿಧಿಗಳನ್ನೆಲ್ಲ ಕೂಡಿಸಿ ಮುಗ್ಗಟ್ಟನ್ನು ಬಗೆಹರಿಸೋದು ಬಿಟ್ಟು ಹೀಗೆ ಒದ್ದಾಡುತ್ತಾರಲ್ಲ!

ಹೀಗೆ ಘನವಾದ ಎಷ್ಟೋ ಯೋಜನೆಗಳ ರೂಪರೇಷೆಗಳನ್ನು ಸವಿವರವಾಗಿ ಆತ ಹೊರಗೆಡಹುತ್ತಲೇ ಇರುತ್ತಾನೆ. ಅದನ್ನು ಕೇಳಿ ನಾವು ' ನೀನು ಅಯೂಬರ ದೇಶದಲ್ಲಿ ಹುಟ್ಟಬೇಕಿತ್ತು, ಮೈಲೇರು ' ಎಂದು ಕನಿಕರಿಸಿದೆವು.

ನಮ್ಮ ಮಂತ್ರಿಗಳು ಕೂಡ ಏಕೆ ಅಯೂಬರ ಆದರ್ಶವನ್ನು ಅನುಸರಿಸಬಾರದು ಎಂಬ ವಿಚಾರ ಬಂತು. ನಮ್ಮ Public relations ಏರ್ಪಾಟು ಪ್ರಚಾರ ಸಾಧನ ಏನೇನೂ ಸುಖವಿಲ್ಲ. ಆಳುವ ಜನಕ್ಕೆ ಕಾಲಬುಡದಲ್ಲಿ ಏನಿದೆಯೆಂದು ಕೂಡ ತಿಳಿದಿರುವುದಿಲ್ಲ ಎಂದು ದೂರುತ್ತಲೇ ಇರುತ್ತಾರೆ ಹೀಗಿರುವಾಗ ಮೈಲೇರುವನಂಥ ಸರ್ವ ಬಲ್ಲ ಭಟ್ಟರನ್ನು ಹಜಾಮತಿಗೆ ನೇಮಿಸಿಕೊಂಡು ಅವರ ಮಾತಿಗೆ ಕಿವಿಗೊಟ್ಟರೆ up to date ತಿಳಿವಳಿಕೆ ಬರುವುದಿಲ್ಲವೆ?

ಅಯೂಬ ಸರಕಾರದ ರೀತಿ ನೀತಿಗಳನ್ನು ಕಂಡರೆ ಅವರು ತಮ್ಮ ಹಜಾಮರಿಂದಲೇ ಲೋಕಪರಿಜ್ಞಾನ ಪಡೆಯುತ್ತಾರೆಂಬುದು ಹೇಳದೆ ತಿಳಿಯುತ್ತದೆ. ನಮ್ಮವರು ಅವರನ್ನೇ ಅನುಸರಿಸಿ ಅವರನ್ನು ಸರಿಗಟ್ಟುವ ಪ್ರಯತ್ನ ಯಾಕೆ ಮಾಡಬಾರದು. ಇನ್ನಾದರೂ ಮೈಲೇರುಗಳು ನಮ್ಮ ಮುಂದಾಳುಗಳ ಗಮನಕ್ಕೆ ಬರಲಿ.

—ರಾಮಿ

ಮುಂದೆ ನಡೆದುದು

" ಮುದ್ನಂಜಿ....ಮುದ್ನಂಜೀ " ಹನುಮ ಹಜಾರಕ್ಕೆ ಹಾರುತ್ತಲೇ ಬಂದ, ಹಲ್ಕಡಿಯುತ್ತಾ.

" ಯಾಕಲೇ ಮೋಯಿನಿ ಅನ್ಕೋಕೇನ್ ರ್‍ವಾಗ ಬಡಿದೈತಿ ನಿಂಗೆ "

" ಇರ್ಲಿ ಮೋಗಿಣಿ ಇತ್ನೋಡು ಏನಾಗೈತಿ ! "

ಆ ದಿನದ ಪತ್ರಿಕೆಯನ್ನು ಅವಳ ಮುಂದೆ ಹರಡಿ ಕೈ ಬೆರಳಿನಿಂದ ತೋರಿಸ್ತಿದ್ದ ಹನುಮ ಕೊಲಂಬಸ್‌ನಂತೆ.

" ಯೇನು ? ನನ್ನೆಸ್ರು ಬಂದೈತಾ ? "

ಕಣ್ಣು ಅಂಗೈಯಗಲ ಅರಳಿಸುತ್ತಾ ಕೇಳಿದಳು ಮೋಹನಕುಮಾರಿ.

" ಅಲ್ಲಾ "

" ಮತ್ತೆ ಯ್ಯಾನ ? "

" ಅವನ ಎಸ್ರು ಆಕವ್ರೆ "

" ಯಾವಂಮಾ ? "

" ಉಳ್ಳಾಕಡ್ಡಿ "

" ಉಳ್ಳಾಕಡ್ಡಿ "

ಈರೋಯಿನ್‌ಗೆ ಸಖೇದಾಶ್ಚರ್ಯಗಳಾಯಿತೆಂದರೆ ನಂಬಲಾರೆಯಾ ಪ್ರಿಯ ಓದುಗ ?

" ಉಳ್ಳಾಕಡ್ಡಿ ಹಲ್ಕ ಕಡ್ಡಿ ಮಾಡ್ತೀನಿ "

" ಏನಾಕವ್ರೆ ಏಳು ಸರ್‍ಯಾಗಿ. ಆಮ್ಯಾಗೆ ಮಾಡೀವಂತಿ ನಿನ ಜಪ "

"ನಿನ ಜಪ ! ...ಜಪ !! (ಪ್ರಿಯ ಓದುಗ ನನ್ನ ಈ ' ಮಧ್ಯಪ್ರವೇಶ 'ವನ್ನು ಮನ್ನಿಸುವೆಯಾ ?) ಈ ಎರಡೇ ಅಕ್ಷರಗಳ ಪದದಿಂದ ನಮಗೆ, ಮುಂದಕ್ಕೆ ಬಹಳ ಸಹಾಯವಾಗುಂತಹ, ಎರಡು ಮುಖ್ಯಾಂಶಗಳು ದೊರೆಯುತ್ತವೆ. ಒಂದು— ಹನುಮನ ಈ " ಜಪ " ಮಾಮೂಲಿಯಾಗಿರಬೇಕು. ಎರಡು—ಈರೋಯಿನ್ ಅದನ್ನು ' ಸೀರಿಯಸ್ಸಾಗಿ ' ತೆಗೆದುಕೊಂಡಿರಲಿಲ್ಲ.

" ಶಿನ್ನದಲ್ಲು ಕೊಟ್ಟುವನೇಂತ ಒಗಳವ್ರೆ...."

" ಅಂಗಾ ! "

ಒಂದೇ ಕ್ಷಣದಲ್ಲಿ " ಎಲ್ಲ " ಅರ್ಥವಾಯಿತು ಈರೋಯನ್‌ಗೆ.

" ಎಷ್ಟು ? "

" ಏನು ? "

" ಅಲ್ಲು "

" ಎಲ್ಡು "

" ಉಳಿದದ್ದು ? "

" ಬಾಯೊಳ್ಗೈತೆ "

" ಸ್ಸರಿ ಅಂಗಾದ್ರೆ "

ಈ ವಿಚಾರ ಸರ (ಪ) ಣಿ ಸಿಗದ ಹನುಮ ಸುಸ್ತಾಗಿ ಕೇಳಿಯೇಬಿಟ್ಟ.

" ಏನು ? "

" ನಿನ ಮೂತಿ "

" ಏನಾಗೈತಿ ? "

" ಸೊಟ್ಟಗಾಗ್ತೈತಿ "

ಅನೈಚ್ಛಿಕ ಮಾಂಸಖಂಡಗಳು ಮನುಷ್ಯನಲ್ಲಿರುತ್ತವೆ. ಸರಕ್ಕನೆ ಹನುಮನ ಕೈ ಮೂತಿಯ ಕಡೆಗೋಡಿತು. ಅವನಿಗೆ ಏನೂ ಸುತರಾಂ ಅರ್ಥವಾಗಲಿಲ್ಲ. ಆದ್ರೆ Love ಮಾಡೋವಾಗ ಏನು ಅರ್ಥವಾಗ್ಬೇಕು ?

" ಮೋಗಿಣಿ ನಿಂಗೆ ಇವಾಗ್‌ನಾದ್ರೂ ತಿಳೀತಾ ಅಲು ಅಲೇ ನೀರು ನೀರೇ ನಿನ್ನನ್ ನಿಜವಾಗಿ Love ಮಾಡೋ ಮಗ ನಾನೊಬ್ಬನೆ. ಆ ಉಳ್ಳಾಕಡ್ಡೀದು ಬರೀ ಪಾಲ್ಟು. ನಿನ್ನೆಸ್ರು ಆಕಿಸ್ದಾ್ಕ ಪ್ಯಾಪರಿನಾಗೆ ಕಳ್ಳಬೊಡ್ಡಿ

" ಏ ಮೂದೇವಿ ಗ್ಯಾನ ಐತಾ ನೈಮ್ಯಾಗೆ. "

" ಐತೆ ಶಿನ್ನಾ್ಕ ಗ್ಯಾನ ದ್ಯಾನ ಎಲ್ಲಾ ನಿಂದೆ. ನಿನ್ನೆಸ್ರು ಆಕಿಸ್ತೀನಿ ಮ್ಯಾಗಡೆ ನನ್ನ.... "

" ಆಕೀಸ್ಲೆ ಮೊದಲು ಅಮ್ಯಾಗೆ ನಿನ ಪುರಾಣ "

ಹನುಮಂದು ' ಮಂಗಪಟ್ಟು ' ಇರಭೌದು ಅವಳ ಪಟ್ಟು ' ಭದ್ರ 'ವಾಗಿತ್ತು.

* * * *

ಈರೋಯಿನ್ ಆ ದಿನ ಚಿಂತಾಕ್ರಾಂತಳಾಗಿದ್ದಳು. ಪೇಪರಿನಲ್ಲಿ ಹೆಸರು ಬರದೇ ಇದ್ದುದೆ ಕಾರಣ ಎಂದುಕೊಂಡರೆ, ಪ್ರಿಯ ಓದುಗಾ, ' ತಪ್ಪಾತು ' ಅಂದುಕೊಳ್ಳಿ. ಅವಳ ಚಿಂತೆಯೇ ಬೇರೆಯಾಗಿತ್ತು. ಅವಳ ಅಂತರ್ದೃಷ್ಟಿ ಪ್ರದೀಪ ಕುಮಾರನ ಚಿನ್ನದ ಹಲ್ಲುಗಳ ಮೇಲಿತ್ತು. ಲೆಕ್ಕಾಚಾರ ತಿಳಿಯದಂತಹ ಹೆಣ್ಣಲ್ಲ ಆಕೆ. ಲೆಕ್ಕ ಹಾಕುತ್ತಳೇ ಇದ್ದಳು. ಮೂವತ್ತೆರಡರಲ್ಲಿ ಎರಡು ಕಳೆದರೆ ಮೂವತ್ತು....ಮೂವತ್ತು !

ಆ ನೆಂಜೆ ಮೋಹನಕುಮಾರಿ ' ಈರೊ 'ಗಾಗಿ ಕಾಯುತ್ತಿದ್ದಳು. ಭಾವೀತಾವ. ' ಈರೊ ' ಬಂದ ತಲೆಯೆತ್ತದೆ, ತಿರುಗಿ ನೋಡದೆ, ಊದಿದ್ದವಡೇಗೆ ಎಡಗೈಯನ್ನು ಗುರಾಣಿಯಂತೆ ಹಿಡಿದು. ಬಂದು....ವ್ಹಾವ್ವದ !....ಹಾಗೆಯೇ.

ಈ ಸಮಯದಲ್ಲಿ ಸುಮ್ಮನಿರುವ ಹೆಣ್ಣಾಗಿದ್ದಿದ್ದರೆ ಅವಳು ' ಈರೋಯಿನ್ ' ಪಟ್ಟಕ್ಕೆ ಅರ್ಹಳೇ ಪ್ರಿಯ ಓದುಗ?

" ಪರ್‌ದೀಪಕುಮಾರ ಅ " ಅವಳು " ಕೊಳಲಿ "ದಳು. ಈರೊ ನಿಂತ ಗಕ್ಕನೆ ತಿರುಗಿದ ಹಿಂದೆ-ಚಕ್ಕನೆ ! ದವಡೆಯಮೇಲೆ ಹಾಗೆಯೇ ಇತ್ತು.

" ನೋವಾ ಪರ್ದೀಪೂ...."

ಈರೋ ಮಾತನಾಡಿದ. ಆದರೆ ಮಾತುಗಳು ಊದಿದ ದವಡೆಯಲ್ಲಿಯೇ ಸಿಕ್ಕಿಹಾಕಿಕೊಂಡವು. ಕೇಳಿಸಿದ ಶಬ್ದ—ಗುರ್‍್ರ.

" ಏನೋ ಕೈ ದುಡುಕ್ತು. ತಪ್ಪಾತು. ಕ್ಷಮ್ಸು"

" ಗುರ್‍್ರ"

" ಇನಮ್ಯಾಗೆ ನಾ ಅಂಗ ಮಾಡೊಲ್ಲ"

" ಗುರ್ ಗುರ್ "

ಇಬ್ಬರೂ ಮನೆಯ ಕಡೆ ನಡೆದರು. ಸ್ವಲ್ಪ ದೂರ ನಡೆಯುವಷ್ಟರಲ್ಲಿ ಅವಳ ಮೌನ-ಕುತೂಹಲ ' ಸೈಸ 'ದಂತಾಯ್ತು.

" ಪ್ಯಾಪರಿನಾಗೆ ನಿನ ಹೆಸ್ರು ಬಂದೈತಿ."

" ಗುರ್‍್ರ"

" ಎಲ್ಡು ಅಲ್ಲು ಕೊಟ್ಟೆಯಂತೆ"

" ಗುರ್‍್ರ"

" ಮಿಕ್ಕಿದ್ ನಂಗ್ಕೊಡ್ತೀಯಾ ಉಂಗ್ರ ಮಾಡಿಸ್ಕೊತೀನಿ"

" ಗುರ್‍್ರ ಗುರ್‍್ರ ಗುರ್‍್ರ"

" ಬೇಕಾದ್ರೆ ನೀನೇ ಎಲ್ಡು ಮಡಕ್ಕೊ ನನಗಂತಾ ಆಸೆಯಿಲ್ಲ" ಈ ಸಾರಿ ಅವನು ' ಗುರ‍್ರ 'ನ್ನಲಿಲ್ಲ ಕೈಯಲ್ಲಿ ಸನ್ನೆ ಮಾಡಿದ ಏನೈನೊ.

" ನಂಗೊತಿಲ್ವಾ ನಿನ ಯೋಗ್ತೆ. ನನಗ್ಯಾಕ್ ಕೊಡ್ತಿ. ನಾ ಯಾಕ ಬೇಕು ನಿಂಗೆ. ಈವತ್ತಿಗೆ ಮುಗೀತು ನಿನ್ನ ರುಣ ಈರ್ " ಗುರ್‍್ರ ಗುರ್‍್ರ" ಎಂದ, ಕೈ ಸನ್ನೆ ಮಾಡ್ದ ಒಟ್ಟಿಗೆ ಅವಳು ಹೊರಟೇ ಹೋದಳು ತಿರುಗಿ ನೋಡದೆ.

ಇಂತು " ಈರೋ " " ಈರೋಯಿನ್ "ಗಳ ಮಧ್ಯೆ ವಿರಸ ವುಂಟಾದಾಗ ಒಂದು ದಿನ....

—" ಎಲ್ಲೆನ್ಸ್ "

ಭೀತಿಯ—ಕಥೆಗಳು

(ಬಲಿತವರಿಗೆ)

ಒಂದಾನೊಂದು ಕಾಡಿನಲ್ಲಿ ಒಬ್ಬ ಬಡವ ಸೌದೆ ಒಡೆಯುತ್ತಿದ್ದನಂತೆ ಅವನ ಕೊಡಲಿ ಜಾರಿ ಪಕ್ಕದಲ್ಲಿದ್ದ ಕೊಳದೊಳಕ್ಕೆ ಬಿದ್ದು ಹೋಯಿತಂತೆ ಗೊಳೋ ಎಂದು ಅಳುತ್ತಾ ಕಣ್ಣೀರು ಸುರಿಸುತ್ತಿದ್ದನಂತೆ.

ಪಾರ್ವತಿ ಪರಮೇಶ್ವರರು ಆಕಾಶದಲ್ಲಿ ಗಾಳಿಸಂಚಾರ ಹೊರಟಿದ್ದರಂತೆ. ಪಾರ್ವತಿಗೆ ಬಡವನ ಗೋಳು ಕಿವಿಗೆ ಬಿದ್ದಿತಂತೆ, "ಏನೋ ಅಂದ್ರೆ ಯಾರೋ ಭಕ್ತ ಅಳುತ್ತಿರುವ ಹಾಗಿದೆ, ಸ್ವಲ್ಪ ಹೋಗಿ ನೋಡಬಾರದೆ" ಅಂದಳಂತೆ. ನನ್ನದು 'Non-Alignment' ಪಾಲಿಸಿ, ಯಾರ ವ್ಯವಹಾರದಲ್ಲೂ ತಲೆ ಹಾಕುವುದಿಲ್ಲ ಎಂದು ಖಚಿತವಾಗಿ ನುಡಿದನಂತೆ ಈಶ್ವರ.

ಹಾಗೆಲ್ಲಾದರೂ ಉಂಟೇ ಎಂದು ಪಾರ್ವತಿ ಹಟ ಹಿಡಿದಳಂತೆ. ಪರಮೇಶ್ವರ ಒಪ್ಪಿದನಂತೆ. ಇಬ್ಬರೂ ಕೊಳದ ಬಳಿ ಬಂದರಂತೆ ಪರಮೇಶ್ವರ ಕೇಳಿದ ಯಾಕಪ್ಪಾ ಅಳುತ್ತಿದ್ದೀಯೇ?

"ನನ್ನ ಕೊಡಲಿ ಕೊಳದಲ್ಲಿ ಬಿದ್ದು ಹೋಗಿದೆ"

ಈಶ್ವರ ಕೊಳದಲ್ಲಿ ಮುಳುಗಿ ಒಂದು ಚಿನ್ನದ ಕೊಡಲಿಯನ್ನು ಹೊರಕ್ಕೆ ತೆಗೆದು 'ಇದು ನಿನ್ನದೇ?'

ಅಲ್ಲಾ ಸ್ವಾಮಿ ಅಲ್ಲಾ ಎಂದು ಬೆಚ್ಚಿದನಂತೆ ಬಡವ. ಈಶ್ವರ ಪುನಃ ಮುಳುಗಿ ಬೆಳ್ಳಿ ಕೊಡಲಿಯೊಂದನ್ನು ತೆಗೆದನಂತೆ.

'ಇದು ನಿನ್ನದೇ?'

'ಅಲ್ಲಾ ಸ್ವಾಮಿ, ನನ್ನದಲ್ಲ'

ಮತ್ತೆ ಮುಳುಗಿ ಕಬ್ಬಿಣದ ಕೊಡಲಿಯನ್ನು ತೆಗೆದು....

'ಇದು ನಿನ್ನದೇ?'

ಹೌದು, ಇದೇ ನನ್ನದು ಅಂದು ಕುಣಿದನಂತೆ.

ಪರಮೇಶ್ವರ ಅವನ ಪ್ರಾಮಾಣಿಕತೆಗೆ ಮೆಚ್ಚಿ ಅವನನ್ನು ಆಶೀರ್ವದಿಸಿ ಚಿನ್ನದ ಕೊಡಲಿಯನ್ನು ಕೊಡಲು ಹೋದನಂತೆ.

ಆಗ ಆ ಬಡವ ಬೆಚ್ಚಿ 'ಪರಮಾತ್ಮ ನಿನ್ನನ್ನು ಬಡವರ ಬಂಧು ಎಂದು ಇದುವರೆಗೂ ತಿಳಿದಿದ್ದೆ. ಆದರೆ ಇಂದು ನಿನ್ನಲ್ಲಿ ನಂಬಿಕೆ ಹೋಯಿತು. ಗೋಲ್ಡ್ ಆರ್ಡಿನೆನ್ಸ್ ಇರುವ ಈ ಕಾಲದಲ್ಲಿ ಚಿನ್ನದ ಕೊಡಲಿಯನ್ನು ಹಿಡಿದು ಹೊರಟರೆ, ಮೊರಾರ್ಜಿ ಕಡೆಯವರು ಅದನ್ನು ಕಿತ್ತುಕೊಂಡು ಅದರಿಂದಲೇ ನನ್ನ ತಲೆ ಕಡಿದು ಬಿಡ್ತಾರೆ' ಹೆಂಡತಿ ಮಕ್ಕಳ ಪಾಡು ಆಮೇಲೆ ಹೇಗೆ? ಭಗವಂತ!" ಎಂದು ಗೋಳಿಟ್ಟನಂತೆ.

ಪರಮೇಶ್ವರ ಬೆಪ್ಪಾದನಂತೆ ಕಬ್ಬಿಣದ ಕೊಡಲಿಯನ್ನೇ ಮತ್ತೆ ಮುಳುಗಿ ತೆಗೆದುಕೊಟ್ಟು ಪಾರ್ವತಿ ಸಮೇತ ಕೈಲಾಸದ ಕಡೆ ಹೊರಟನಂತೆ. 'Non-Alignment' ತತ್ವದ ಉಪಯೋಗ ಪಾರ್ವತಿಗೆ ಆಗ ತಿಳಿಯಿತಂತೆ.

"ಮಹೇಶ್ವರ ವರ ಕೊಟ್ಟರೂ ಮೊರಾರ್ಜಿ ಬಿಡ"-ಎಚ್ಚರಿಕೆ!

—ಮೀನಾಕ್ಷಿರಾಜ.

ಡಾಕ್ಟರ ಮನೆಯ ಟೆಲಿಫೋನ್ ಕೆಟ್ಟುಹೋಗಿತ್ತು. ಕಾರಣ ಹತ್ತೂಸಲ ಟೆಲಿಫೋನ್ ಬಾರಿಸಿದಾಗ, ಡಾಕ್ಟರು ಎದ್ದು ಹೋಗಿ, "ಇದಲ್ಲ ವಿಧಾನಸೌಧ" ಎಂದು ಹೇಳಿ ಬೇಸತ್ತಿದ್ದರು.

ಹನ್ನೊಂದನೆಯ ಸಲ "ರಿಂಗ್" ಆಯಿತು. ಒದ್ದು ಬಿಡೋಣವೇ ಟೆಲಿಫೋನನ್ನ ಅನ್ನಿಸಿತು, ಪಾಪ! ರೋಗಿಯಾಗಿದ್ದರೆ! ಅಂತಲೂ ಅನ್ನಿಸಿತು. ಎದ್ದು ಹೋಗಿ ಎತ್ತಿದರು.

"ವೀರಭದ್ರಯ್ಯ ಇದಾರೆಯೇ" ಅಂದಿತು ದೂರವಾಣಿ.

"ಇಲ್ಲಪ್ಪ! ದಕ್ಷಯಜ್ಞಕ್ಕೆ ಹೋಗಿದ್ದಾನೆ" ಅಂದರು ಡಾಕ್ಟರು ಬಸವಳಿದು.

* * * *

ಬೊಂಬಾಯಿ ಆಸ್ಪತ್ರೆಯ ಘೋಷಾ ವಾರ್ಡಿನಲ್ಲಿದ್ದ ಮಗಳು ಸತ್ತಳೆಂದು ಕೇಳಿದ ನಾಸರ್ ಎಂಬಾತ ಒಳಕ್ಕೆ ನುಗ್ಗಲು ಹೋದಾಗ, ಅಡ್ಡ ಬಂದ ದಾದಿಯ ಕತ್ತು ಹಿಸುಕಿದನಂತೆ. ಉಳಿದ ದಾದಿಯರು ಬಂದು ಬಿಡಿಸಬೇಕಾಯ್ತಂತೆ.

- ಈಗ ಅಲ್ಲಿನ ದಾದಿಗಳು ಯಾವಾಗಲೂ ಮುಂಜಾಗ್ರತೆಗಾಗಿ ಮೆಣಸಿನ ಪುಡಿಯ ಪೊಟ್ಟಣವನ್ನು ತಮ್ಮ ಹತ್ತಿರ ಇಟ್ಟುಕೊಂಡಿರುತ್ತಾರಂತೆ!

* * * *

ವಿಸ್ತೃತ ಜೀವನದ ವಿಪತ್ತು

ಅರವತ್ತು ತುಂಬಿದ ಶ್ರೇಷ್ಠ ಸಾಹಿತಿಗಳಿಗೆ ನಮ್ಮೂರಿನಲ್ಲೂ ಮೊನ್ನೆ ಗೌರವ ಸಮಾರಂಭವಿತ್ತು "ಅವರ ಪದ್ಯಗಳನ್ನು ನಾನು ಓದಿಲ್ಲವಾದರೂ ಅವರು ಮಹಾಕವಿ ಎಂಬುದನ್ನು ಒಪ್ಪತಕ್ಕದ್ದು" ಎಂಬುದಾಗಿ ಅಧ್ಯಕ್ಷ ಪೀಠವನ್ನಲಂಕರಿಸಿದ್ದ ನಮ್ಮೂರಿನ ಎಮ್ಮೆಲ್ಲೆಗಳು ಅಪ್ಪಣೆ ಕೊಡಿಸಿದ್ದನ್ನು ನೀವು ಪೇಪರುಗಳಲ್ಲಿ ಓದಿರಬಹುದು ಆದರೆ ಅಧ್ಯಕ್ಷ ಭಾಷಣ ನಡೆಯುವ ಹೊತ್ತಿಗೆ ಒದಗಿದ ಒಂದು ಚಿಲ್ಲರೆ ವಿಪತ್ತನ್ನು ನೀವು ಕೇಳಿದ್ದೀರೋ ಇಲ್ಲವೋ

ಅವತ್ತು ಗೌರವಿಸಲ್ಪಟ್ಟ ಸಾಹಿತಿಗಳು ವಿಸ್ತೃತ ಜೀವನದ ಮಹತ್ವವನ್ನು ತಮ್ಮ ಭಾಷಣದಲ್ಲಿ ಮನಗಾಣಿಸಿದ್ದರು. ಟೋಪಿ ಕೋರೆಯಾಗುವಷ್ಟರ ಮಟ್ಟಿಗೆ ಅದನ್ನು ಕೇಳಿ ತಲೆದೂಗಿದ ಅಧ್ಯಕ್ಷರು ತಮ್ಮ ವಿಸ್ತಾರವಾದ ಕೊರಳಿಗೆ ವಿಸ್ತೃತ ಜೀವನವೆಂಬ ಶ್ಲೋಗನ್ನನ್ನೆ ಬಲವಾಗಿ ಹಿಡಿದರು

"ನಮ್ಮ ಕವಿಗಳು ಹೇಳಿದ ಹಾಗೆ ನಾನು ಕೂಡ ವಿಸ್ತಾರವಾಗಿ ಬದುಕೋದಕ್ಕೆ ಪ್ರಯತ್ನಿಸಿದ್ದೇನೆ" ಎಂದು ಅವರು ಪ್ರಾರಂಭಿಸಿದಾಗಲೇ ಸಭಿಕರಲ್ಲನೇಕರಿಗೆ ಬರಲಿರುವ ಅನಾಹುತದ ಮುನ್ಸೂಚನೆ ದೊರೆಯಿತು "ನೋಡಿ ಮೂರು ಸಾವಿರ ಕೈಬಿಟ್ಟರೂ ಚಿಂತೆಯಿಲ್ಲ ಅಂತ ಶತಪ್ರಯತ್ನ ಮಾಡಿ ಈ ಊರಿನ ಪಂಚಾಯ್ತಿ ಪ್ರೆಸಿಡೆಂಟಾದೆ—ಅಲ್ಲ ಚುನಾಯಿಸಲ್ಪಟ್ಟೆ ಮಾರಾಮಾರಿಯಾದರೂ ಬಿಡದೆ ಸೊಸೈಟಿ ಅಧ್ಯಕ್ಷನಾದೆ. ಆಮೇಲೆ ಎಮ್ಮೆಲೆಗೂ ಸ್ಪರ್ಧೆ ಮಾಡಿ ಗೆದ್ದೆ. ಅರ್ಧ ಲಕ್ಷ ಕೈಕಚ್ಚಿತು ಬಿಡಿ. ಆ ಮಾತು ಬೇರೆ ಆಮೇಲೆ ನನ್ನ ರಸ್ತೆ ಕಂಟ್ರಾಕ್ಟ್ ಎಷ್ಟು ವಿಸ್ತಾರವಾದದ್ದೆಂದು ನಿಮಗೆಲ್ಲ ತಿಳಿದೇ ಇದೆ. ಊರೊಳಗೆ ಹತ್ತು ಮನೆ ಕಟ್ಟಿಸಿ ಹಾಕಿದ್ದೇನೆ, ಒಂದು ಸಾಮಿಲ್ ಹಗಲಿರುಳು ಕೆಲಸ ಮಾಡ್ತಾ ಇದೆ ಪೆಟ್ರೋಲ್ ಬಂಕಂತೂ ಇದ್ದೇ ಇದೆಯಲ್ಲ ಎಂಟು ಲಾರಿ, ಎರಡು ಕಾರು ಹೇಗೂ ಇದೆ. ಇನ್ನು ಮುಚ್ಚು ಮರೆಯಾತಕ್ಕೆ? ಎರಡು ಲಗ್ನ ಎರಡು ಸಂಸಾರ ಹದಿನಾಲ್ಕು ಮಂದಿ ಮಕ್ಕಳು ಮರಿ ಹ್ಹಿ ಹ್ಹಿ ಹ್ಹಿ....ಅಂತೂ ಸಾಕಷ್ಟು ವಿಸ್ತಾರವಾಗೇ ಇದೆ ನನ್ನ ಜೀವನ ಅಂತ ನಿಮಗೆ ಕಾಣಿಸುಲ್ಲವೆ ..."

ಹೆಚ್ಚು ಕಡಮೆ ಇದೇ ಶೈಲಿಯಲ್ಲಿ ಮುಂದುವರಿಯುತ್ತ ಅಧ್ಯಕ್ಷರು ಪಕ್ಕದಲ್ಲಿದ್ದ ಸಾಹಿತಿಗಳತ್ತ ಹೊರಳಿ ನೋಡಿದರು. ಸಾಹಿತಿಗಳು ಕಣ್ಣು ಮುಚ್ಚಿ ಕುರ್ಚಿಯಲ್ಲಿ ಒರಗಿದ್ದು ಯೋಗನಿದ್ರೆಯಲ್ಲಿರುವಂತೆ ಕಂಡರು ಸಭಿಕರು ಲಕ್ವಾ ಹೊಡೆದಂತೆ ಕಣ್ಣು ಬಾಯಿ ಬಿಡುತ್ತಿದ್ದರು. ಚಪ್ಪಾಳೆ ಹೊಡೆಯುವಷ್ಟು ಚೈತನ್ಯವಿಲ್ಲ. ಅಧ್ಯಕ್ಷರು ಭಾಷಣ ನಿಲ್ಲಿಸಿ ಎರಡು ಕ್ಷಣಗಳಾದ ಮೇಲೆ 'ಸಭೆ' ನಿಧಾನವಾಗಿ ಚೇತರಿಸಿಕೊಂಡಿತು. ಸಾಹಿತಿಗಳೂ ದೊಡ್ಡದಾಗಿ ಆಕಳಿಕೆ ಬಿಟ್ಟರು. ಅಧ್ಯಕ್ಷರ ವಿಸ್ತೃತ ಜೀವನದ ವರ್ಣನೆಯಿಂದ ಒದಗಿದ ವಿಪತ್ತು ಒಮ್ಮೆಗೆ ತೊಲಗಿತು.

—ರಾಮಿ.

“ನಂಬಿ ಕೆಟ್ಟವರಿಲ್ಲವೊ!”

ದೊಡ್ಡ ಷಹರಿನ, ಚಿಕ್ಕಪೇಟೆಯ, ದೊಡ್ಡದಾರಿಯ ಚಿಕ್ಕಂಚಿನಲ್ಲಿ ಅವ ಕುಳಿತಿದ್ದ ಬೆನ್ನ ಹಿಂದುಗಡೆ ಇದ್ದ ಗೋಡೆಯ ಮೇಲೆ ಅಂಗೈಯ್ಯಿನ ಚಿತ್ರದ ಪಟವೊಂದು ತೂಗುಬಿದ್ದಿತ್ತು. ಕುಳಿತವನೆದುರಿಗೆ ಗೋಣಿಚೀಲವೊಂದು ಹಾಸಿತ್ತು. ಪಕ್ಕದಲ್ಲೇ ವಿಭೂತಿಯ ಡಬ್ಬವೊಂದು ತುಂಬಿತ್ತು.

ಜಟೆಯನ್ನು ಬೆಳೆಸಿ, ನುಣ್ಣಗೆ ಬಾಚಿ, ಎತ್ತಿ ಗಂಟನ್ನು ಕಟ್ಟಿದ್ದ ಅವ. ಹಣೆಗೆ ಅಡ್ಡಗಲವಾಗಿ ಆರು ಗೀರು ಗಂಧ. ಮಧ್ಯೆ ಕುಂಕುಮದ ಕಾಸಗಲ ದುಂಡು ಬಲಗಿವಿಗೆ ಬಾವಲಿ ತೂಗುಬಿದ್ದಿದೆ. ಎಡಗಿವಿಯಲ್ಲಿ ಹತ್ತು ಕಡಕು. ಜೋರವಾದ ತೀಡಿಟ್ಟಿದ್ದ ಮೀಸೆ ಲಕ್ಷಣವಾದ ಮುಖ

ಹಾದಿಯಲ್ಲಿ ಹೋಗೋರು ಬರೋರು, ಒಮ್ಮೆ ಇವನ ಕಡೆಗೆ ದೃಷ್ಟಿ ಹಾಯಿಸಿ ಮುಂದೆ ಸಾಗೋರು ಇಂತಹ ದೃಶ್ಯ ಸಾಮಾನ್ಯ

ಹೋಗುತ್ತಿದ್ದ ಒಬ್ಬಾತ ನಿಂತ. ರಸ್ತೆಯ ಅಂಚಿಗೆ ಬಂದು ಗೋಣಿಚೀಲದ ಮೇಲೆ ಕುಳಿತ. ಅಂಗೈ ಚಾಚಿದ.

ಹಸ್ತಸಾಮುದ್ರಿಕಾಚಾರ್ಯ ಒಂದು ಚಿಟಿಕೆ ವಿಭೂತಿಯನ್ನು ಡಬ್ಬದಿಂದ ತೆಗೆದು ಚಾಚಿದ ಅಂಗೈ ಮೇಲೆ ಹಾಕಿದ ಹ್ರಾಂ ಹ್ರೀಂ ಹ್ರೂಂ ಅಂತ ಏನೋ ವಟವಟಗುಟ್ಟುತ್ತಾ, ಮುಂದೆ ಕುಳಿತಿದ್ದವನ ಮುಖವನ್ನೊಮ್ಮೆ, ಜೇಬನ್ನೊಮ್ಮೆ ಮೂರು ಸಾರ್ತಿ ದೃಷ್ಟಿಸಿ ನೋಡಿದ. ಅನಂತರ ಅಂಗೈಯನ್ನು ಹಿಡಿದು, ಧೂಳು ಹೊಡೆದು, ಹಠಾತ್ತನೆ ಚೀರಿದ.

“ಎಲಎಲಎಲಾ ಇದೆಂತಹ ಧನರೇಖೆ ನಿನ್ನ ಅಂಗೈಯಲ್ಲಿ! ಎಷ್ಟು ಆಳವಾಗಿದೆ, ಎಷ್ಟು ಕೆಂಪಾಗಿದೆ? ಎಷ್ಟು ಉದ್ದುದ್ದ ಇದೆ. ಇಂತಹದೇ ರೇಖೇನ ಕಲ್ಕತ್ತಾದಲ್ಲಿದ್ದಾಗ ಬಿರ್ಲಾ ಅನ್ನೋರ ಅಂಗೈಯಲ್ಲಿ ನೋಡಿದ್ದೆ. ಅದಾದ ಮೇಲೆ ಇದೇ ಎರಡನೆ ಬಾರಿ ನನ್ನ ಜೀವಮಾನದಲ್ಲಿ ನೋಡ್ತಾ ಇರೋದು” ಎಂದು ಉದ್ಗಾರ ತೆಗೆದ.

ಚಾಚಿದ ಅಂಗೈಯನ್ನು ಇನ್ನೆರಡು ಬಾರಿ ಹಿತವಾಗಿ ಹಿಸುಕಿದ. “ಅರೆ! ಇದೇನು” ಅಂತ ಆಶ್ಚರ್ಯ ಸೂಚಿಸಿದ. ಭೂತಕನ್ನಡಿಯೊಂದನ್ನು ಹೊರತೆಗೆದ. ಭೂತಕನ್ನಡಿ ಹಾಕಿ, ತರ್ಜನಿ ಬೆರಳ ಮೂಲವನ್ನು ಹುಡುಕಿದ. ಹ್ಞಾ! ಹ್ಞಾ! ಅಂದ. ಒಂದೊಂದು ಸರ್ತಿ ಉದ್ಗಾರ ತೆಗೆದಾಗಲೂ, ಅಂಗೈ ಚಾಚಿದವನ ಮುಖ ಉತ್ಸಾಹದಿಂದ ತುಳುಕುತ್ತಿತ್ತು. ಆಸೆಯಿಂದ ತುಂಬುತ್ತಿತ್ತು. ಸಂತೋಷದಿಂದ ಮಿನುಗುತ್ತಿತ್ತು.

"ಅದೃಷ್ಟರೇಖೆ ಅಂದರೆ ಹೀಗಿರಬೇಕು. ಚಂದ್ರಗುಡ್ಡದಿಂದ ಹೊರಟ ಈ ರೇಖೆ ತರ್ಜನಿ ಮೂಲದತನಕ ಒಂದೇ ಸಮನೆ ಹಾಯ್ದುಹೋಗಿದೆ. ದಿಟ. ಮಧ್ಯೆ ಒಂದು ದ್ವೀಪಕಾಣಿಸಿದೆ. ಆದರೆ ಆನಂತರ ಮುಂದುವರೆದಿದೆ ಕಾಶ್ಮೀರದ ಅರಮನೆಗೆ ನಮ್ಮ ಗುರುಗಳ ಜತೆಯಲ್ಲಿ ಹೋಗಿದ್ದಾಗ ಮಹಾರಾಜರ ಕೈಯ್ಯಲ್ಲಿ ಇದೇ ತರಹ ರೇಖೆ ಇದ್ದಿದ್ದನ್ನು ನೋಡಿದ್ದೆ. ಗುರುಗಳು ಹೇಳಿದ್ದು ಜ್ಞಾಪಕ ಇದೆ. "ಇಂತಹ ರೇಖೆ ಇರೋ ಅಂಗೈ ಕಂಡರೆ ನಿನ್ನ ಅದೃಷ್ಟ ಖುಲಾಯಿಸಿತು ಅಂತ ತಿಳಿದುಕೊ" ಅಂತ. "ಅದು ಯಾಕೆ ಹಾಗೆ ಅಂತೀರಿ ಗುರುಗಳೇ! ಅದೃಷ್ಟ ರೇಖೆ ಆ ಅಂಗೈಲಿ ಇದ್ದರೆ, ಇದ್ದೋರಿಗೆ ಅದೃಷ್ಟ. ನೋಡಿದೋರಿಗೆ ಹ್ಯಾಗೆ ತಾಕುತ್ತೆ" ಎಂದು ಕೇಳಿದ್ದೆ. ಅದಕ್ಕೆ ಗುರುಗಳು ಅಪ್ಪಣೆ ಕೊಡಿಸಿದ್ದರು:—"ವತ್ಸಾ ಕೇಳು, ಹೀಗಿರೋ ಅದೃಷ್ಟ ರೇಖೆಯುವರು ಬಹಳ ಧಾರಾಳ ಮನಸ್ಸಿನವರು, ಕರ್ಣನಂತೆ ದಾನ ಶೂರರು, ಶಿಬಿಯಂತೆ ದಯಾಳುಗಳು. ಅಂತಹವರ ಕೈಹಿಡಿದ ಮೇಲೆ ನಿನಗೆ ತಾಪತ್ರಯವಾದರೂ ಹೇಗೆ ಬಂದೀತು?" ಎಂದಿದ್ದರು. ಈಗ ನನ್ನ ಅದೃಷ್ಟ. ನಿಮ್ಮ ಕೈಲಿ ಅಂತಹ ರೇಖೇನ ಕಾಣ್ತಾ ಇದೀನಿ" ಎಂದ ಸಾಮುದ್ರಿಕಾಚಾರ್ಯ. ಅಂಗೈಯನ್ನು ತನ್ನ ಬೆರಳುಗಳಿಂದ ಮುಟ್ಟಿ, ತನ್ನ ಕಣ್ಣುಗಳಿಗೆ ಆ ಬೆರಳುಗಳನ್ನು ಒತ್ತಿಕೊಂಡ.

ಚಾಚಿದ ಅಂಗೈಯ್ಯಿನವ, ಅಂಗೈಯನ್ನು ಹಿಂದಕ್ಕೆ ಎಳೆದುಕೊಂಡ ಚಡ್ಡಿಯ ಜೇಬಿಗೆ ಕೈಹಾಕಿದ. ಎರಡು ದಿನದ ದುಡಿತದ ಫಲವಾದ ಒಂದು ರೂಪಾಯನ್ನು ತೆಗೆದ. ಸಾಮುದ್ರಿಕಾಚಾರ್ಯನ ಎದುರಿಗೆ ಎಸೆದ.

ಛಂಗ್ ಅಂತ ಎದ್ದು ನಡೆದುಹೋದ. ಅವನು ಹೊರಟ ಜೋರಿಗೆ ರಸ್ತೆಯಲ್ಲಿ ಬರುತ್ತಿದ್ದ ಆಟೋರಿಕ್ಷಾಗಳು ಕೂಡ ವಾರೆಯಾಗಿ ಹೋದುವು —

ಚಾಚಿದ ಅಂಗೈಯ್ಯಿನವ ಜಟ್ಕಾ ಬಳಿಗೆ ಹೋದ ಒಳಗೆ ಕುಳಿತಾಗ ಅವನ ಮೀಸೆಯ ತುದಿಗಳೆರಡೂ ಕುಣಿದಾಡುತ್ತಿದ್ದುವು.

ಚಾವಟಿಯ ಹಿಡಿಯನ್ನು ಗಾಡಿಯ ಚಕ್ರದ ಅಡ್ಡಪಟ್ಟಿಗಳ ಕಡೆಗೆ ಹಿಡಿದು, "ಛಲ್ ಬೇಟಾ! ಕುಬೇರ್‌ಕಾ ರೇಖಾ ಮೇರಾ ಹಾತ್‌ಮೇ ಹೈ" ಎಂದು ತನ್ನ ಜಟ್ಕಾ ಕುದುರೆಗೆ ಹಿಗ್ಗಿ ಹೇಳಿದಾಗ, ಕುದುರೆ ಟೊಕ ಟೊಕ ಅಂತ ಮುಂದೆ ಸಾಗಿತ್ತು, ಚಾವಟಿ ಹಿಡಿಯು ಲಟ ಲಟಾ ಅಂತ ಗಾಲಿ ಚಕ್ರವನ್ನು ನುಡಿಸುತ್ತಿತ್ತು. ಎಂದಿನಂತೆ ಮಾಮೂಲಾಗಿ ಜಟ್ಕಾ ಹೊಡೆಯುವ ಕೆಲಸವನ್ನೇ ಅವ ಮಾಡುತಾ ಮುಂದುವರೆದರೂ, ಮನಸ್ಸಿನಲ್ಲೇ ರಾಜಮಹಾರಾಜರು ಉಣ್ಣುವ ಮಂಡಿಗೆಯನ್ನೇ ಮೆಲ್ಲುತ್ತಿದ್ದ.

ಒಂದು ರೂಪಾಯಿಕೊಟ್ಟು ಈ ನಂಬಿಕೆ ಹುಟ್ಟಿಸಿಕೊಂಡರೆ, ಚೆನ್ನು ಅಲ್ಲವೇ? ನಂಬಿ ಕೆಟ್ಟವರಿಲ್ಲ ಅಲ್ಲವೇ?

—ಕುಮಾರ್.

ಮುಳ್ಳೂರಿನಲ್ಲಿ ಕ್ರಿಕೆಟ್

ಮುಳ್ಳೂರಿನ ರಿಕ್ರೂಟಿಂಗ್ ಕಛೇರಿಯ ಮುಂದೆ ನೆರೆದಿದ್ದ ಆ ಜನಸ್ತೋಮವನ್ನು ನೋಡಿದ ಮೇಲೆ, ಚೀನಿಯರನ್ನು ಮ್ಯಾಕ್‌ಮಹೋನ್ ಗೆರೆಯಿಂದ ಆಚೆಗೆ ಒಗೆಯುವುದು ಕಷ್ಟವಾಗಲಾರದು ಅಂತ ನನಗೆ ನಂಬಿಕೆಯಾಯ್ತು.

ಮುಳ್ಳೂರಿನ ಏಸ್ ಶಿಕಾರಿ ಎಂಕ್ಟಪ್ಪ, ಪಟೇಲ್ ಮುಳ್ಳೂರಯ್ಯ, ಶ್ಯಾನುಭೋಗ ನಾರಣಪ್ಪ, ಮಠದ ಮರಿ ಶಿಂಗ್ರಿಂಗಾರಿ, ಪೂಜಾರಿ ತಾತಾಚಾರಿ, ನಾಯಿಂದನಾಯ್ಡು ಇತ್ಯಾದಿ ಇತ್ಯಾದಿಗಳೆಲ್ಲಾ ಸಾಲುಗಟ್ಟಿ ನಿಂತಿದ್ದ ದೃಶ್ಯ ಕಣ್ಣಲ್ಲಿ ನೀರು ತರಿಸುವಂತಿತ್ತು. ಮುಳ್ಳೂರಿನ ಪರವಾಗಿ ನಾನೇ "ಭಲೇ" ಅಂತ ಬೆನ್ನು ತಟ್ಟಿಕೊಂಡೆ. ಮುಳ್ಳೂರಮ್ಮ ಹಡೆದ ಈ ವೀರಪುತ್ರರು ಭಾರತಾಂಬೆಯನ್ನು ಕಾಪಿಡಲಾರರೇ" ಎಂದು ಬೋಕ್ಕೈಸಿಕೊಂಡೆ.

ನಮ್ಮ ಡಿವಿಜನ್ನಿನ ಕಲೆಕ್ಟರ್ ಸಾಹೇಬರು ತಮ್ಮ ಪತ್ನಿಯೊಂದಿಗೆ ಆಗಮಿಸಿದ್ದರು. ಕೇಂದ್ರ ಮಂತ್ರಿಗಳೊಬ್ಬರು ನಮ್ಮೂರಿಗೆ ಬಂದಿದ್ದಾಗ ಯಾವುದೋ ಅಜ್ಞಾನದಲ್ಲಿ, ಮುಳ್ಳೂರಿನಿಂದ ಮುನ್ನೂರು ಮಂದಿ ಯೋಧರನ್ನು, ನೂರು ತೊಲ ಬಂಗಾರವನ್ನು ಕೊಡಿಸುವುದಾಗಿ ಅವರು ಭರವಸೆಯಿತ್ತಿದ್ದರು. ಕಲೆಕ್ಟರ್ ಸಾಹೇಬರ ಆಪ್ತಕಾರ್ಯದರ್ಶಿಯಾದ ನಾನು, ಸಾಹೇಬರನ್ನು ಪಕ್ಕಕ್ಕೆ ಕರೆದು "ಹಾಗೆಲ್ಲಾ ಭರವಸೆ ಕೊಡಬೇಡಿ ಸಾರ್. ಮುಳ್ಳೂರಿನ ವಿಷಯ ನಂಬುವಹಾಗಿಲ್ಲ" ಅಂತ ಹೇಳಿದ್ದೆ.

"ನಿನಗೆ ತಿಳಿಯೂದಿಲ್ಲ ಸುಮ್ನಿರಯ್ಯ. ನಾನು ಭರವಸೆ ಕೊಟ್ಟಮೇಲೆ ಮುಗೀತು ಹೇಗಾದರು ಮಾಡಿಯೇ ತೀರುತ್ತೇನೆ" ಅಂತ ಭಂಡ ಧೈರ್ಯ ಪ್ರದರ್ಶಿಸಿದ್ದರು ರಿಕ್ರೂಟ್‌ಮೆಂಟ್ ಆಫೀಸಿನ ಮುಂದೆ ನೆರೆದಿದ್ದ ಆ ಜನಸಂಖ್ಯೆಯನ್ನು ಕಂಡೆ ಅವರ ಎದೆ ಉಬ್ಬಿತ್ತು "ನೋಡಿದೆಯಾ ನನ್ನ ಮಾತು ಹುಸಿಯಾಗುವುದಿಲ್ಲ" ಎನ್ನುವಂತೆ ನನ್ನೆಡೆಗೆ ಜಂಭದ ಕೋಳಿಯ ದೃಷ್ಟಿ ಬೀರಿ, ಅಮ್ಮಾವರೊಂದಿಗೆ ಕುರ್ಚಿಯಲ್ಲಿ ಮಂಡಿಸಿದ್ದರು.

ಸಾಲುಗಟ್ಟಿ ಲೈನಿನಲ್ಲಿ ನಿಂತಿದ್ದವರಿಗೆಲ್ಲಾ ಮೇಜರ್ ರಹಿಮತುಲ್ಲಾ ಖಾನರು ಉರ್ಟ್‌ಪ್ರಿಸ್ ಹಾಕಿಸಿ ಸುಸ್ತುಮಾಡಿದರು. ನಂತರ ಬೊಕ್ಕತಲೆಯ ಮಿಲ್ಟ್ರಿ ವೈದ್ಯರು, ವೈದ್ಯಪರೀಕ್ಷೆಗೆ ಶುರು ಹಚ್ಚಿದರು. ಪರೀಕ್ಷೆಗೆ ಸಿಕ್ಕಿದ ಮೊದಲನೇ ಇಸಂ ನಮ್ಮ ಏಸ್ ಶಿಕಾರಿ ಎಂಕ್ಟಪ್ಪ. ವೈದ್ಯರ ಮುಂದೆ ಎಂಕ್ಟಪ್ಪ ಹೋಗಿ ಎದೆ ಸೆಟೆಸಿ

ನಿಂತುಕೊಂಡ, ಅವನನ್ನು ಸರಿಯಾಗಿ ಗಮನಿಸದೆ ತಕ್ಕಡಿಗೆ. ಹಾಕಿದಾಗ ನೂರೈವತ್ತು ಪೌಂಡು ತೂಗಿದ. ನಂತರ ವೈದ್ಯರ ಗಮನಕ್ಕೆ ಅವ ಪೂರ್ಣ ವೇಷ ದೊಂದಿಗೆ ತಕ್ಕಡಿಯಲ್ಲಿ ಕುಳಿತಿದ್ದು ಕಂಡು ಬಂತು. ಅವನ ವೇಷವನ್ನು ಬಿಚ್ಚಿಸಿ ಬರೀ ನಿಕ್ಕರಿನಲ್ಲಿ ಅವನ ವಜನ್ ನೋಡಿದಾಗ ಐವತ್ತರ ಮೇಲೆ ಏಳಲಿಲ್ಲ. ವೈದ್ಯರಿಗೆ ಆಶ್ಚರ್ಯವಾಗಿರಬೇಕು. ಎಂಕ್ಟಪ್ಪ ತನಗಿಂತ ಎರಡರಷ್ಟು ತೂಕದ ವೇಷವನ್ನು ಹೊರುತ್ತಾನಲ್ಲ ಅಂತ.

"ಉಟ್ ಬ್ರೈಸ್ ಹಾಕಿದರೇನ್ರಿ" ವೈದ್ಯರು ಕೇಳಿದರು ಅವನ ಎದೆಯಮೇಲೆ ಸ್ಟೆತಾಸ್ಕೋಪನ್ನಿಡುತ್ತಾ.

"ಆಕ್ದೆ ಬುದ್ಧಿ...."

"ಉಸಿರೆಳೀರಿ. ಕೈ ಮೇಲಕ್ಕೆತ್ತಿ. ಉಸಿರು ಬಿಡಿ."

"ಬುಟ್ಟೆ...."

ಏನ್ರಿ. ಎಮುಕೆಯಲ್ಲಾ ಕಾಣುತ್ತಲ್ರಿ. ಬಾಲ್ಯದಲ್ಲೇನ್ನಾದ್ರು ಗೂರ್ಲು ಇತ್ತೇನ್ರಿ."

"ಇತ್ತು ಬುದ್ಧಿ."

"ಸರಿ ದಯಮಾಡಿಸಿ"

ಎಂಕ್ಟಪ್ಪ ಹೊರಬಂದಾಗ, ಮುಳ್ಳೂರಯ್ಯ ಕಾಲನ್ನು ಎಳೆದುಹಾಕುತ್ತಾ ಶರವೇಗದಿಂದ ಒಳನುಗ್ಗಿದ. ಅವನ ಕುಂಟುಕಾಲನ್ನು ನೋಡಿಯೇ ವೈದ್ಯರಿಗೆ ಅಸಮಾಧಾನವಾಗಿತ್ತು. ಅವನ ಹೊಟ್ಟೆಯನ್ನು ನೋಡಿ, ಹೆಚ್ಚಿಗೆ ತೂಗಬಹು ದೆಂದು ನಿರೀಕ್ಷಿಸಿದ್ದ, ವೈದ್ಯರಿಗೆ ಭಾರಿ ನಿರಾಸೆಯಾಯಿತು.

"ನಿಮ್ಮ ಕಾಲು ಯಾವಾಗಲ್ರಿ ಕುಂಟಾಯ್ತು?"

"ಉಟ್ಟಾಗಿಂದ ಬುದ್ಧಿ. ನಾನು ಉಟ್ದಾಗ ಬಲೇ ಮುದ್ದಾಗಿದ್ನಂತೆ ಬುದ್ಧಿ. ಎರಗೆ ಮಾಡ್ಸೋಕೆ ಬಂದಿದ್ದೋಳ್ಗೆ ಒಟ್ಟೆ ಉರಿ ಬಂದು, ನನ್ನ ಕಾಲ್ನ ತಿರುಚಿ ಬುಟ್ಳಂತೆ. ನಮ್ಮವ್ವಾ ಅಂಗೆ ಏಳ್ತಾ ಇದ್ಳು...."

"ಸರಿ ದಯಮಾಡ್ಸಿ...."

ಮಠದ ಮರಿ ಶಿಂಗ್ರೈಂಗಾರಿ ನಾಲ್ಕಡಿ ಎತ್ತರಕ್ಕೇ ಬೆಳೆಯುವುದನ್ನ ನಿಲ್ಲಿಸಿ, ಅದೇ ನಾಲ್ಕಡಿ ಅಡ್ಡಗಲಕ್ಕೆ ಬೆಳೆದಿದ್ದ. ಅವನನ್ನು ನೋಡಿದರೆ ಹಳೆ ಶಿಲಾಯುಗದ ಗೂಳಿಗಳ ನೆನಪಾಗುತ್ತಿತ್ತು. ಅವನನ್ನು ತೂಕಕ್ಕೆ ಹಾಕಿದಾಗ ರಹಿಮತುಲ್ಲಾ ತಂದಿದ್ದ ತೂಕದ ಮೆಷೀನ್ನಿನ ಮುಳ್ಳು ಗಿರಗಿರನೆ ತಿರುಗಿ ಮುರುತುಕೊಂಡಿತು. ವೈದ್ಯರು ಹೈಟ್ ಸಾಲದು ಅಂದಾಗ ಶಿಂಗ್ರೈಂಗಾರಿ ಎಗರಲಾಡಿದ

"ಏನ್ರಿ ಸಾಬ್ರಿ ಹಾಗಂದ್ರೆ. ನೆಪೋಲಿಯನ್ ಬೋನೋಪಾರ್ಟ್ ಎಷ್ಟೆತ್ರ ಇದ್ದ. ಮೂರುಮುಕ್ಕಾಲಡಿ ಗೊತ್ತೆ. ನನ್ನ ಭುಜಕ್ಕೆ ಬರ್‍ತಿದ್ದ ಇಸಂ. ಇಡೀ ಯೂರೋಪನ್ನೇ ಗುಡುಗಾಡಿಸಲಿಲ್ಲವೇನ್ರಿ? ಶಿವಾಜಿ ಎರಡೂವುಕ್ಕಾಲಡಿ ಮನುಷ್ಯ, ಹಿಂದೂ ಸಾಮ್ರಾಜ್ಯವನ್ನೇ ಪುನರುದ್ಧಾರಮಾಡಲಿಲ್ವೆ? ಹಿಸ್ಟರಿ ಇದೇನಾ ನೀವು ಓದಿರೋದು?" ಅಂತ ಎಲ್ಲರೆದುರಿಗೆ ಮಾಧ್ಯಮಿಕ ಶಾಲೆಯ ಚರಿತ್ರೆಯ ಉಪಾಧ್ಯಾಯನಾಗಿದ್ದ ಅವನ ದೋಸ್ತಿ ಮೈಲಾರಿ ಹೇಳಿದುದನ್ನ ಜ್ಞಾಪಿಸಿಕೊಂಡು, ದಬಾಯಿಸಿದ. ಆದರೆ ಆ ಬೊಕ್ಕತಲೆಯ ಡಾಕ್ಟರು ಅದಕ್ಕೆಲ್ಲಾ ಜಗ್ಗುವ ಇಸಂ ಆಗಿರಲಿಲ್ಲ. ನಡುಗುವ ತಲೆಯನ್ನು ಇನ್ನೂ ನಡುಗಿಸಿದರು.

ಪುಡಾರಿ ತಾತಾಚಾರಿಯ ರಕ್ತ ಶುದ್ಧವಿಲ್ಲ. ಶಾನುಭೋಗ ನಾರಣಪ್ಪನಿಗೆ ದೃಷ್ಟಿಮಾಂದ್ಯ, ನಾಯಿಂದ ನಾಯ್ಡುವಿಗೆ ಬೆನ್ನುಪಣಿ, ಅಂಗಡಿ ಶೆಟ್ಟಿಗೆ ಆಸ್ತಮ, ಅಕ್ಕಸಾಲೆ ಪಾವಂಜೆಗೆ ತುರಿಗಜ್ಜಿ, ಕಬ್ಬಿಣದ ಕಾಳಪ್ಪನಿಗೆ ಕಾಮಾಲೆ, ಅಂತೂ ಮುಳ್ಳೂರಿನ ಯೋಧರಲ್ಲಿ ಅವರು ಒಂದಲ್ಲ ಒಂದು ಹುರುಪ ಕಂಡರು. ಐಬುಗಳನ್ನು ಹೊರಗೆಡಹಿದರು. ಲೋಕಲ್ ಧನ್ವಂತರಿ, ಗುರುರಾಜಾಚಾರ್ಯರಿಗೆ ಇದನ್ನು ನೋಡಿ ಆಶ್ಚರ್ಯವೇ ಆಯಿತು. "ಇಷ್ಟು ಮಂದಿ ಮುಳ್ಳೂರಿನವರಿಗೆ ಖಾಯಿಲೆಯಿರುವಾಗ, ತನಗೆ ಇಷ್ಟು ದಿನವಾದರೂ ವ್ಯಾಪಾರ ಕುಲಾಯಿಸಿಲ್ಲವಲ್ಲ" ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡರವರು.

ಕುರ್ಚಿಯ ಮೇಲೆ ಕುಳಿತಿದ್ದ ಕಲೆಕ್ಟರ ಕಡೆ ನಾನು ನೋಡಿದಾಗ ಅವರ ಮಿಾಸೆ ಬಾಗಿತ್ತು. ಅವರು ವೈದ್ಯರಿಗೆ ಹೇಳಿ ನೋಡಿದರು. "ಇಷ್ಟು ಮಂದಿಯಲ್ಲಿ ಒಂದು ಹತ್ತು ಜನವನ್ನಾದರೂ ಆರಿಸಿ ಡಾಕ್ಟ್ರೇ. ಕಡೇ ಪಕ್ಷ ಶಿಂಗ್ರೈಂಗಾರಿನಾದ್ರೂ ಫಿಟ್ ಮಾಡಿ. ಅವ ಪುಳಿಯೋಗರೆ ಹೊತ್ತು ಮುಳ್ಳಾದ್ರಿ ಬೆಟ್ಟವನ್ನ ದಿನಕ್ಕೆ ಹತ್ತು ಸಲ ಹತ್ತೋ ಮನುಷ್ಯ. ಇನ್ನು ಮೆಷಿನ್‌ಗನ್ ಹಿಡಿದು, ಹಿಮಾಲಯದಲ್ಲಿ ಓಡಾಡ್ದೆ ಇರ್ತಾನೆಯೇ? ಅವನು ಪಿಸ್ತೂಲೇಟಿಗೆ ಕುಳ್ಳಾಗಿರುವುದರಿಂದ ಸಿಕ್ಕಲಾರ. ಅವನನ್ನ ಫಿಟ್ ಮಾಡಿ" ಅಂತ ಹೇಳಿದರು. ಕೇಳಿಕೊಂಡರು. ಬೊಕ್ಕ ತಲೆಯ ಮೇಲೆ ಹ್ಯಾಟನ್ನಿಟ್ಟುಕೊಂಡ ಡಾಕ್ಟರು, "I am Sorry. Rule is Rule" ಅಂತ ಹೇಳಿ, ಮೇಜರ್ ರಹಿಮತ್ತುಲ್ಲಾನನ್ನ ಕರೆದುಕೊಂಡು ಹೊರಟೇಬಿಟ್ಟರು.

"ಯೋಧರ್ದಂತೂ ಹೀಗಾಯ್ತು. ಇನ್ನು ನೂರು ತೊಲೆ ಚಿನ್ನ ಹೇಗೆ ಕೂಡಿಸಲಿ" ಅಂತ ಗೋಳುಮುಖದಿಂದ ಕಲೆಕ್ಟರು ತಮ್ಮ ಅಗ್ನಿಸಾಕ್ಷಿ ಪತ್ನಿಯ ಕಡೆಗೆ ನೋಡಿದಾಗ, ಹತ್ತು ಸೇರು ಭಂಗಾರವನ್ನು ಹೊತ್ತಿದ್ದ ಆಕೆ, ತನ್ನ ಕೈಗಳನ್ನೂ, ಕತ್ತನ್ನೂ, ಸೆರಗಿನಿಂದ ಮುಚ್ಚಿಕೊಂಡು ಮುಗುಮ್ಮಾಗಿ ಕಾರಿನೆಡೆಗೆ ನಡೆದಳು.

—ಕೆ. ಎನ್. ಕಿಟ್ಟಿನ್.

ಸ್ವಾತಂತ್ರ್ಯ ವೀರನಿಗೆ ಶಿಲಾಂಜಲಿ

ಚನ್ನಪ್ಪ, ವೀರಚೆನ್ನಪ್ಪ, ಸ್ವಾತಂತ್ರ್ಯವೀರ
ಬಿಳಿಗುಂಡಿಗೆದೆಕೊಟ್ಟ ಅಪ್ರತಿಮಶೂರ

ಬಾಲ್ಯ—ಕವಣೆ ಎಸೆಯುವ ಚೆನ್ನ ಕಾಲೇಜು ಸೇರಿದನು
ಸ್ವಾತಂತ್ರ್ಯಸಮರದಲಿ ಸೈ ಎಂದು ಧುಮುಕಿದನು
ನೂರು ಕಿಟಕಿಯ ಗಾಜು ನುಚ್ಚುನೂರಾಯ್ತು
ಕಾಲೇಜು ಗೋಡೆಗಳು ಇದ್ದಲಕ್ಷರವಾಯ್ತು

ಯವ್ವನ—ಓಟರಿನ ಜೇಬಿನಲ್ಲಿ
(ಕಲ್ಲೆಸೆದ ರೀತಿಯಲಿ)
ನೋಟುಗಳ ತಾ ಎಸೆದು
ಡಿಗ್ರಿ 'M. A.' ಯ ಒಳಗೆ
'L' ನ್ನೂ ಸೇರಿಸಿದ.

ಅಧಿಕಾರ—ಪುಂಡಾಟ ಬಿಡಲಿಲ್ಲ
ಭಂಡತನ ಪಾಲಿಸಿದ
ಮಂಡ್ಯದಾ ಬೆಣ್ಣೆಯಿಂ
ಮಂತ್ರಿ ಪದವಿಯ ಪಡೆದ
ಸೈಕಲ್ಲು ತಾ ಹೋಯ್ತು
ಬ್ಯೂಕು ಏರಿದ ಚನ್ನ
ಮನೆ ಕಟ್ಟಿ, ಸೈಟ್ ಮಾಡಿ
ಜನರೆದುರು ತಾ ಮೆರೆದ

ಶಿಲಾಂಜಲಿ—ಊರಿನಲೋ ಅಂದು ತಳಿರುತೋರಣ
ಚೆನ್ನ ಬರುವರೆನೆಂದು ಹಗರಣ
ಸ್ವಾತಂತ್ರ್ಯವೀರನಾ ಭಾಷಣವ ತಾ ಕೇಳೆ
ಬಂದಿದ್ದ ಜನರಿಂದ ಕಲ್ಲಿನಾ ಸುರಿಮಳೆ

[ವಿ.ಸೂ. —ರಾಜೀವಪುರದ ಅಸೆಂಬ್ಲಿ ನಂಬ್ರು ಚೆನ್ನಪ್ಪ ಕಳೆದ ಜನವರಿ ೩೦ ರಂದು ದೇಶಭಕ್ತರ ದಿನಾಚರಣೆ ಆಚರಿಸಿದ ಸಂದರ್ಭದಲ್ಲಿ ನಡೆದ ಪ್ರಸಂಗ]

—ಮೀನಾಕ್ಷಿರಾಜ

ಹೇಳಲೇಬೇಕಾಯ್ತು !

ಶಂಕರು ತಂದೆ ನನ್ನ ದವಾಖಾನೇಗೆ ಬಂದರು. "ಏನು ಯಜಮಾನ್ರೆ ಏನು ಬೇಕಾಗಿತ್ತು" ಎಂದು ವಿನಯದಿಂದ ಕೇಳಿದೆ. "ಸ್ವಲ್ಪ ಮಾತನಾಡ ಬೇಕಾಗಿತ್ತು ನಿನ್ನ ಕೆಲಸವೆಲ್ಲಾ ಮುಗೀಲಪ್ಪಾ" ನನಗೇನೂ ಅವಸರವಿಲ್ಲ" ಎಂದು ಮುದುಕರು ರೋಗಿಗಳೆಲ್ಲ ಹೋಗುವ ತನಕ ಕಾದಿದ್ದರು. ಆಮೇಲೆ ಒಳ ಕೊಠಡಿಗೆ ಬಂದು ಕೂತರು. "ಗುಟ್ಟಾಗಿ ಮಾತನಾಡಬೇಕು. ನಿನ್ನ ಹತ್ತಿರ ಅಲ್ಲದೆ ಇನ್ನೂ ಯಾರ ಹತ್ತಿರ ಹೇಳಿಕೊಳ್ಳಲ್ಲಪ್ಪಾ" ಎಂದು ಗೋಗರೆಯುವ ದನಿಯಲ್ಲಿ ಹೇಳಿದರು.

ಒಂದು ನಿಮಿಷ ನನಗೂ ಅನುಮಾನ ಬಂತು. ಮುದುಕ ಈ ವಯಸ್ಸಿನಲ್ಲಿ ಏನಾದರೂ ಪೆಚ್ಚುಮಾಡಿಕೊಂಡಿರಬಹುದೇ ಎಂದು. ಈಗಿನ ಕಾಲದ ಮುದುಕ ರನ್ನ ನಂಬುವುದು ಕಷ್ಟ ಅಂತಲೂ ಅನ್ನಿಸಿತು. ಬಾಗಿಲು ಹಾಕಿದೆ ಅಗಳಿ ನೂಕಿದೆ. "ಹೇಳಿ, ಯಜಮಾನ್ರೆ. ಪರವಾಗಿಲ್ಲ. ನಿಮ್ಮ ಗುಟ್ಟೆಲ್ಲಾ ನನ್ನ ಎದೆಯಿಂದ ಹೊರಗೆ ಎಲ್ಲೂ ಹೋಗೋದಿಲ್ಲ ಎಂದು ಭರವಸೆ ಕೊಡ್ತೀನಿ" ಎಂದೆ. "ಎಷ್ಟು ದಿನದಿಂದ" ಎಂದು ಮುಗುಮ್ಮಾಗಿ ಕುಮ್ಮಕ್ಕು ಕೊಟ್ಟೆ.

"ಸುಮಾರು ಎರಡು ತಿಂಗಳಿಂದ" ಅಂದರು.

"ಮತ್ತೆ ಮೊದಲೇ ಬರಬಾರದಾಗಿತ್ತೆ" ಎಂದೆ.

"ಏನೋ ಹಾಗೇ ಸರಿಹೋಗುತ್ತೆ ಅಂತಿದ್ದೆ ಆದರೆ ಇತ್ತೀಂದೀಚೆಗೆ ಸ್ವಲ್ಪ ವಿಪರೀತಕ್ಕಿಟ್ಟುಕೊಂಡಿದೆ" ಎಂದರು. ಬಹಳ ಸಂಕಟಪಡುತ್ತಿದ್ದಂತೆ ಕಾಣಿಸಿತು "ಏನೂ ಹೆದರಬೇಡಿ, ಯಜಮಾನ್ರೇ ಏನು ಬಂದಿದ್ದರೂ ಪರವಾಗಿಲ್ಲ ಅದಕ್ಕೆಲ್ಲ ದಿವ್ಯಾಷಧಿಗಳಿವೆ ನನ್ನ ಹತ್ತಿರ" ಎಂದು ಅವರಿಗೆ ಧೈರ್ಯ ತುಂಬಿದೆ.

ಅವರ ಮುಖ ಸ್ವಲ್ಪ ಹಗೂರಾದ ಹಾಗೆ ಕಾಣಿಸಿತು.

"ಆ ಧೈರ್ಯ ಇರೋದರಿಂದಲೇಪ್ಪಾ ನಿನ್ನ ಹತ್ತಿರ ಬಂದಿದ್ದು" ಎಂದರು "ಹ್ಞು" ಅಂದೆ. ಅವರೇ ವಿಶದ ಪಡಿಸಲಿ ಅಂತ ಕೂತೆ

" ನೋಡಪ್ಪಾ! ನಿನ್ನಿಂದ ಶಂಕರುಗೆ ಕೈ ತುಂಬ ಹಣ ಬರೋ ಕೆಲಸ ಸಿಕ್ಕಿದ್ದಪ್ಪಾ! ಯಾವುದೋ ಕೊಂಪೇಲಿ ಸ್ಕೂಲ್ ಮೇಷ್ಟರಾಗಿ ಒದಾಡ್ತಿದ್ದ ಅದರಿಂದ ಬಿಡುಗಡೆ ಮಾಡಿಸಿ, ಔಷಧಿ ಕಂಪೆನಿಯ ಸಂಚಾರಿ ಮಾರಾಟಗಾರನ ಕೆಲಸಾನ ಕೊಡಿಸ್ದಿ. ನಂಗೆ ಚೆನ್ನಾಗಿ ಜ್ಞಾಪಕ ಇದೆ, ಶಂಕರು ಆಗ ಬೂಡ್ಸ್ ಅಂಗಡೀಲಿ ಕೆಲಸಕ್ಕೆ ಸೇರ್ಕ್ಕೋತೀನಿ ಅಂತ ಹಾರಾಡ್ತಾ ಇದ್ದ. ಬ್ರಾಹ್ಮಣನಾಗಿ ಹುಟ್ಟಿ, ಬೂಡ್ಸು ಮಾರೋಣ ಎಂದರೆ ಯಾಕೋ ನನಗೆ ಮನಸ್ಸು ಅಳುಕ್ತಪ್ಪಾ; ಇಂತೋರ ಕೈಲಿ ಹ್ಯಾಗೆ ತಿಥಿಮಾಡಿಸ್ಕೊಳ್ಳೋದು ಎಂದು ದುಃಖವೇ ಆಯಿತು. ಆ ಹೊತ್ತಿನಲ್ಲಿ ನನ್ನ ಭಾಗದ ದೇವರ ಹಾಗೆ ನೀನು ಬಂದೆ, ನಿನ್ನ ಸಹಪಾಠೀಗೆ ಈ ಸಂಚಾರಿ ವ್ಯಾಪಾರದ ಕೆಲಸಾನ ಕೊಡಿಸ್ದೆ ಅವತ್ತಿನಿಂದ ನಮ್ಮ ಮನೇಲಿ ನಗುವಿನ ಹೊಳೆಯೇ ಹರಿಯಿತು. ಅಂದ ಹಾಗೇ ನಿನಗೆ ಜ್ಞಾಪಕ ಇದೆಯೇ?

ಹದಿಮೂರು ವರ್ಷಗಳಿಂದ ನನ್ನ ದೊಡ್ಡ ಅಳಿಯ ನಮ್ಮನೇಲೇ ಠಿಕಾಣಿ ಹಾಕಿದ್ದ. ನಾಲ್ಕು ಮಕ್ಕಳಾಯಿತು, ಎರಡುಸಾರಿ ಮೈ ಇಳಿದಿದ್ದಾಯಿತು. ಹೆಂಡತಿ ಮಕ್ಕಳನ್ನು ಕರಕೊಂಡು ಅವನೇನೂ ಬೇರೆ ಹೋಗೋಹಾಗೆ ಕಾಣಿಸುತ್ತಿಲ್ಲ. ಶಂಕರು ಯಾವು ಯಾವುದೋ ಮಾದರಿ ಔಷಧಿಗಳನ್ನು ಮನೇಲಿ ತಂದಿಟ್ಟ ನೋಡು ಮೂರು ವಾರದಲ್ಲಿ ಮೂರು ರಾತ್ರಿ ಅಳಿಯಿಂದಿರಿಗೆ ನಿದ್ರೆ ಬರಲಿಲ್ಲ. ಉಬ್ಬಸಕ್ಕೆ ಶುರು ವಾಗಿತ್ತು. ಕಡೆಗೆ ಉತ್ತರದ ಬಡಾವಣೇಲಿ ಗಾಳಿ ಚೆನ್ನಾಗಿ ಬರುತ್ತೆ ಅಲ್ಲಿ ಮನೆ ಮಾಡಿದ್ದೀನಿ ಎಂದು ಹೇಳಿ ಅವ ಮದುವೆಯಾದ ಹದಿಮೂರು ವರ್ಷಕ್ಕೆ ಈಗ ತಾನೆ ತನ್ನ ಸಂಸಾರಾನ ಬೇರೆ ಹೂಡಿದ.

ಈಗ ಮನೇಲಿ ಎಲ್ಲಾ ಸುಖವಾಗಿದೆ ಇಷ್ಟರಲ್ಲೇ ಶಂಕರೂಗೆ ಮದುವೆ ಮಾಡಿ ಬಿಡೋಣ ಅಂತ ಅಂದುಕೊಂಡಿದ್ದೆ.

ಆದರೆ ನೋಡು! ಏನೋ ಗ್ರಹಚಾರ ಕ್ರೂರವಾಗಿದೆ ನಮ್ಮೇಲೆ. ಶಂಕರು ಹೇಗೆ ಹೇಗೋ ಆಡುಕ್ಕೆ ಶುರು ಮಾಡಿದ್ದಾನೆ. ಕೆಲವು ದಿನ ಸಂಜೆಗೆ ಮುಂಚೇನೇ ಮನೆಗೆ ಬಂದು ಮಟಿ ಕೋಳಿಹಾಗೆ ಕೂತುಬಿಡ್ತಾನೆ. ಇನ್ನೂ ಕೆಲವು ದಿನ ರಾತ್ರಿ ಹನ್ನೊಂದಕ್ಕೆ ಬರ್ತಾನೆ. ಡಾಕ್ಟರುಗಳನ್ನು ನೋಡಬೇಕಾಗಿತ್ತು ಕೆಲಸ ಹೆಚ್ಚು ಅಂತ ಸಬೂಬು ಹೇಳ್ತಾನೆ. ಮುಖವೇ ಹೇಗೋ ಆಗಿಬಿಟ್ಟಿದೆ ಎಂದರು.

ನಾನು ನಕ್ಕೆ " ಇದಕ್ಕೆ ಯಾಕೆ ಯೋಚನೆ ಮಾಡ್ತೀರಿ, ಯಜಮಾನ್ರೇ! ಕೆಲವು ಡಾಕ್ಟರುಗಳು ರಾತ್ರಿ ದವಾಖಾನೆಗಳನ್ನು ನಡೆಸುತ್ತಾರೆ. ಹತ್ತು ಹನ್ನೊಂದರ ತನಕ ಕೆಲಸಮಾಡ್ತಾರೆ. ಅವರನ್ನು ವಿರಾಮವಾದಾಗ ನೋಡಿ ಬುಟ್ಟೀಗೆ ಹಾಕ್ಕೋ ಬೇಕು, ಶಂಕರು ಹೊತ್ತಾಗುತ್ತೆ ಅದಕ್ಕೆ ಯಾಕೆ ಯೋಚನೆ?" ಎಂದೆ.

"ನಾನೂ ಹಾಗೇ ಅಂದುಕೊಂಡಿದ್ದೆ ಕಣಪ್ಪಾ! ಆದರೆ ಈಚೀಚೆಗೆ ವಿಚಿತ್ರ ವ್ಯವಹಾರ ಕಾಣಿಸುತ್ತಿದೆ. ಆದಕ್ಕೇ ನನಗೆ ಯೋಚನೆ" ಎಂದರು ಶಂಕರು ಅಪ್ಪ.

"ಅಂತಹ ವಿಚಿತ್ರ ವ್ಯವಹಾರ ಏನು ಯಜಮಾನ್ರೇ!" ಎಂದೆ

"ಅಂತಹ ದೊಡ್ಡ ವಿಷಯ ಏನೂ ಅಲ್ಲ ಆದರೂ ಮುಂಬರುವುದನ್ನು ಸೂಚಿಸುವ ವಿಷಯ ಕಣಪ್ಪಾ. ಅದಕ್ಕೇ ಕಾಳಜಿ ಯಾಗ್ತಾ ಇದೆ. ಮಾದರಿ ಔಷಧಿಗಳನ್ನು ಅಂದ ಚೆಂದದ ಶೀಷೆಗಳಲ್ಲಿ ಕಳಿಸ್ತಾರೆ. ನಿಂಗೂ ಗೊತ್ತಲ್ಲಪ್ಪ! ಅಂತಹ ಶೀಷೆ ಒಂದೆರಡನ್ನು ಉಪಟಾಯಿಸಿ ನಶ್ಯೆ ಹಾಕಿಟ್ಕೊಳ್ಳೋಣ ಅಂತ ಮೂರು ವಾರದಿಂದಾನೂ ಕಾಯ್ತಾ ಇದ್ದೀನಿ. ಆದರೆ ಅಂತಹ ಶೀಷೆಗಳು ಬಂದಕೂಡಲೆ ಎಲ್ಲವನ್ನು ತೊಗೊಂಡು ಹೋಗಿ ಯಾರುಯಾರಿಗೋ ಕೊಟ್ಟು ಬಿಟ್ಟು ಬಂದ್ಬಿಡ್ತಾನೆ. ಇಷ್ಟರಲ್ಲಿ ನಮ್ಮ ಪಕ್ಕದ್ಮನೆ ನರಸಜ್ಜೀಗೆ ಒಂದು ಮಧ್ಯಾಹ್ನ ಒಂದು ತರಹ ಹೊಟ್ಟೆ ಶೂಲೆ ಬಂದ್ಬಿಡ್ತು. ಅವರ ಮನೇಲಿ ಯಾರೂ ಗಂಡಸರು ಇರ್ತಿಲ್ಲ. ಮನೆಯಾಕೆ, ಬಂದು ಡಾ| ಮಂಡೋದರಿ ಬಾಯನ್ನು ಕರಕೊಂಡು ಒನ್ನಿ ನರಸಜ್ಜೀನ ಅವರೇ ನೋಡಿಕೋತಾ ಇದಾರೆ ಅಂದರು. ಡಾ| ಮಂಡೋದರಿಬಾಯಿಯ ಮನೆಗೆ ಹೋದೆ. ಚಿಕ್ಕವಯಸ್ಸು ಆಕೇಗೆ ದೊಡ್ಡ ದೇಹ ಆದರೂ ಎಳಕು ಮುಖ. ಬಂದ್ಬಿಟ್ಟೆ ಒಂದು ನಿಮಿಷ ಕೂತುಕೊಳ್ಳಿ" ಎಂದು ಆಕಿ ಹೇಳಿ ಒಳಕ್ಕೆ ಹೋದಳು. ಸುತ್ತಲೂ ನೋಡಿದೆ ಅಂದ ಚೆಂದದ ಮಾದರಿ ಶೀಷೆಗಳೆಲ್ಲ ಅವಳ ಮೇಜಿನಮೇಲೆ ಇತ್ತು. 'ಆಹ್ಞಾ' ಎಂದುಕೊಂಡೆ. ಅಷ್ಟರಲ್ಲಿ ಆಕಿ ಬಂದರು, ನರಸಜ್ಜಿ ಮನೆಗೆ ಬಂದೆವು. ನರಸಜ್ಜೀಗೆ ಇನ್ಜಕ್ಷನ್ನು ಕೊಟ್ಟು ಆಕೆ ಹೊರಗೆ ಬರೋತನಕ ಅಲ್ಲೇ ಕಾದಿದ್ದೆ. ಟಾಕ್ಸಿ ತಂದು ಆಕೇನ ಹಿಂತಿರುಗಿ ಮನೆ ಸೇರಿಸ್ಬಿಟ್ಟು ಬರೋಣ ಅಂತ. ಆಕೇನೂ ಹೊರಗೆ ಬಂದಳು. ನಾನೂ ಟಾಕ್ಸಿ ತರಲು ಹೋದೆ. ಟಾಕ್ಸೀನ ಬೇಗಲೇ ತಂದೆ.

ಅಷ್ಟು ಹೊತ್ತಿಗೆ ಶಂಕರು ಮನೆಗೆ ಹಿಂತಿರುಗಿ ಬಂದಿದ್ದ. ಪಕ್ಕದಮನೆ ವರಾಂಡಾದಲ್ಲಿ ಡಾ| ಮಂಡೋದರಿಬಾಯಿ ಇರೋದನ್ನು ಕಂಡು ಕ್ಷೇಮ ಸಮಾಚಾರ ವಿಚಾರಿಸುಕ್ಕೆ ಅಂತ ಹೋಗಿದ್ದ. ಆಕಿ ಹತ್ತಿರ ಮಾತಾಡ್ತಾ ಇದ್ದ. ಆವೇಳೆಗೆ ನಾನು ಟ್ಯಾಕ್ಸಿ ತಂದಿದ್ದು. ಅವರಿಬ್ಬರೂ ನಿಂತು ಮಾತಾಡ್ತಾ ಇದ್ದದ್ದು ನೋಡಿದೆ. ಅವರಿಬ್ಬರ ಮುಖಾನೂ ನೋಡಿದೆ. ಯಾಕೋ ಮನಸ್ಸು ದುಃಖದಿಂದ ತುಂಬಿತು. ಮಂಡೋದರಿಬಾಯಿ ನಮ್ಮನೆ ಸೊಸೆ ಆಗಿ ಬಿಡ್ತಾಳೇನೋ ಅಂತ ಭಯ ಆವರಿಸಿಬಿಟ್ಟಿದೆ. ಆಕೀನ ಮದುವೆಯಾದರೆ ಶಂಕರು ಯಾವಾಗಲೂ ಆಕಿ ಕೈಕೆಳಗೇ ನಿಂತಿರಬೇಕಾಗುತ್ತೆ ಅದಕ್ಕೇ ನಿನ್ನ ಹತ್ತಿರ ಬಂದೆ.

ಬರಬಾರದ ಕಷ್ಟ ಬಂದಿದೆ. ಅಪ್ಪಾ! ನೀನೆ ಸರಿಮಾಡಬೇಕು ಎಂದು ಗೋಗರೆಯುಕ್ಕೆ ಶುರು ಮಾಡಿದರು. ಕಣ್ಣಂಚಿನಲ್ಲಿ ನೀರನ್ನೂ ಒರೆಸಿಕೊಂಡರು

" ಇವಕ್ಕೆ ಯಾಕೆ ಯೋಚನೆ ಮಾಡ್ತೀರಿ ಯಜಮಾನ್ರೆ! ನೀವು ಊಹಿಸಿದ್ದು ಆಗುಲ್ಲ. ನಂಗೆ ಚೆನ್ನಾಗಿ ಗೊತ್ತು ... ಮಂಡೋದರಿ ಸಂಪಾದನೆ‌ಲಿ ಕಾಲು ಭಾಗದಷ್ಟು ಶಂಕರು ಸಂಪಾದಿಸುಲ್ಲ ... ಖಂಡಿತವಾಗಿ ಶಂಕರೂನ ಮದುವೆ ಮಾಡಿಕೊಳ್ಳುಲ್ಲ. ನಾನು ಭರವಸೆ ಕೊಡ್ತೀನಿ" ಎಂದೆ.

" ಆದರೂ ಹೆಣ್ಣುಮಕ್ಕಳ ಮನಸ್ಸು ಹೀಗೆ ಅಂತ ಹೇಳುಕ್ಕೆ ಬರುಲ್ಲ ಮನಸ್ಸು ಮೆಚ್ಚಿದರೆ, ಎಂತಹ ಗಂಡನನ್ನಾದರೂ ಮದುವೆಮಾಡಿಕೊಂಡು ಬಿಡ್ತಾರಪ್ಪ! ಸಂಪಾದನೆ, ಸಮತೂಕ, ಸಮ ಎತ್ತರ, ಅಂತವನನ್ನು ನೋಡುಲ್ಲ ನಿನಗೆ ಅನುಭವ ಸಾಲದಪ್ಪ, ಈ ವಿಚಾರದಲ್ಲಿ ನಮ್ಮ ಹುಷಾರೀಲಿ ನಾವು ಇರಬೇಕು ಈ ವಿಚಿತ್ರ ವ್ಯವಹಾರ ಮುಂದುವರಿಯದ ಹಾಗೆ ಏನಾರೂ ಮಾಡಬೇಕಪ್ಪಾ" ಎಂದರು ಶಂಕರು ಅಪ್ಪ.

ಆಗ ಹೇಳಲೇಬೇಕಾಯ್ತು. ಇಲ್ಲದೆ ಇದ್ದರೆ ಆತ ಸುಮಸುಮ್ಮನೆ ಒದ್ದಾಡ್ತಾ ಇರ್ತಾರೆ ಅನ್ನಿಸಿತು "ಶಂಕರು ಹೀಗೆ ಹೀಗೆ ಮಾದರಿ ಶೀಷೆಗಳನ್ನ ಮೇಲಿಂದ ಮೇಲೆ ತಂದುಕೊಡ್ತಾನೆ" ಅಂತ ಮಂಡೋದರೀನೇ ನನಗೆ ಒಂದು ಸಂಜೆ ಹೇಳಿದ್ದಳು "ಹಾಗು ಹಾಗೆ ಕಣೆ! ಒಳ್ಳೆಯೋನು" ಅಂತ ನಾನೂ ಹೇಳಿದೆ ಪಾಪ, ಶಂಕರು ಅಪ್ಪನ ಮನಸ್ಸಿಗೆ ಶಾಂತಿ ದೊರಕಿಸೋಣ, ಸ್ವಲ್ಪ ಮೊದಲೇ ಸುದ್ದಿ ಹೇಳಿದರೆ ಏನಾಗುತ್ತೆ ಮಹಾ! ಅಂತ ಯೋಚಿಸಿ, 'ಹೆದರಬೇಡಿ ಯಜಮಾನ್ರೆ, ಮಂಡೋದರೀನ ಇನ್ನೊಂದೆರಡು ತಿಂಗಳಲ್ಲಿ ನಾನೇ ಮದುವೆಯಾಗುತ್ತೇನೆ. ಆನಂತರ ಇಬ್ಬರೂ ಇಂಗ್ಲೆಂಡಿಗೆ ಆರು ತಿಂಗಳ ವ್ಯಾಸಂಗಕ್ಕೆ ಹೋಗೋದು ಅಂತ ತೀರ್ಮಾನಿಸಿದ್ದೇವೆ ಈಗಲೇ ತಿಳಿದರೆ, ವಿದ್ಯಾರ್ಥಿ ವಿಲಾಯತಿ ವ್ಯಾಸಂಗದ ಸ್ಕಾಲರ್‌ಷಿಪ್ಪನ್ನು ಕೊಡ್ತೀನಿ ಅಂತ ಮಾತುಕೊಟ್ಟರೊ ಮಂತ್ರಿಗಳು ಚಕ್ಕರ್ ಹಾಕಿಬಿಡಬಹುದು. ಆದಕ್ಕೇ ಯಾರಿಗೂ ಹೇಳಿಲ್ಲ. ನೀವೂ ಈ ವಿಷಯವನ್ನು, ನಾವು ಮದುವೆಯಾಗೋ ತನಕ ಗೋಪ್ಯವಾಗಿಟ್ಟುಕೊಂಡಿರಿ ಎಂದು ಹೇಳಿದೆ.

—ಡಾ॥ ಕಿಟ್ಟಿ

ಮಕ್ಕಳು ಕಡಿಮೆಯಿರುವ ನೌಕರರು ಶ್ರದ್ಧೆಯಿಂದ ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ಆರೋಗ್ಯ ಸಚಿವೆಯರು ಹೇಳಿದರಂತೆ; ಸಭೆಯಲ್ಲಿ

—ಅಂದರೆ ಮಕ್ಕಳಿಲ್ಲದವರು ತುಂಬಾ ಚೆನ್ನಾಗಿ ಕೆಲಸ ಮಾಡ್ತಾರೆ ಎಂದು ಅಂಬೋಣವೇ" ಎಂದು ಸದಸ್ಯರು ಕೇಳಿದರಂತೆ.

— ಹೌದು! ನನ್ನ ಹಾಗೆ ಚೆನ್ನಾಗಿ ಕೆಲಸ ಮಾಡೋರು ಯಾರೂ ಇಲ್ಲ ಎಂದು ಸಚಿವೆಯರು ಹೇಳಲೇ ಇಲ್ಲವಂತೆ.

* * * *

ಗಮಾಗಮಾ ಗಮಾಡಸತಾವ

ಶ್ರೀ ಬೇಂದ್ರೆಯವರ ಕ್ಷಮೆಕೋರಿ, ರಾಮೋತ್ಸವದಿಂದ ಸ್ಫೂರ್ತಿಪಡೆದು

ಗಮಗಮಾ ಗಮಾಡಸತಾವ ದೋಸಾ
ಹೊರಟಿದ್ದೀಗ ನೀವು ಎಲ್ಲಿಗಾ ?

ಸಂಗೀತವೇನು ಶಾಸ್ತ್ರವೇನು ?
ಅಲ್ಲಿ ನಿಮ್ಮ ಪಾತ್ರವೇನು ?
ಮೇಲಾಗಿ ನಿಮ್ಮ ಎತ್ರವೇನು
ಅಲ್ಲಿ ನೀವು ನೋಡಲಿಕ್ಕೆ
ಹೊರಟಿದ್ದೀಗ ನೀವು ಎಲ್ಲಿಗಾ ?

ಕಳೆದ ವರುಷ ರಾಮರುತ್ಸವ
ನೋಡಲೆಂದು ನಿಮಗೆ ಉತ್ಸಹ
ಇದೇ ಸುಬ್ಬಲಕ್ಷ್ಮಿ ಸುಂದರಾಂಬೆ
ರಾಧಾ ಪಟ್ಟಮ್ಮ ಜಯಲಕ್ಷ್ಮಿಯರು

ಮುಂದು ಸಾಲಲೆ ಕೂತು,
ಕತ್ತ ಹಿಂದಕೆ ಜೋತು,
ಅರೆಗಣ್ಣ ಮುಚ್ಚಿ ಮೆಲಕುತ್ತಿದ್ದಿರಿ
ನಿಮ್ಮೊಳಗೆ ಏನನೋ ಪಲಕುತಿದ್ದಿರಿ

ಹಿಗ್ಗಾಯ್ತು ಎಮ್ಮ ಎಮ್ಮೊಳಗೆ
ಸಂಗೀತದಲಿ ನಿಮ್ಮಭಿರುಚಿಯು ಕಂಡು
ನುಗ್ಗಿದ್ದಾಯ್ತು ನಾವು ಮೆಲ್ಲಮೆಲ್ಲನೆ ಹೊರಗೆ
ಕೂತದ್ದಾಯ್ತು ನೀವು ಲೇಸಿಥೇರಿನಲಿ ಬಂದು

“ ಹರಿಕಾಂಭೋಜಿ ” ಹೇಗಿತ್ತೆಂದರೆ
“ ತಿಡಿ ಭೋಜನವಾಗಲೆಂ ”ದಿರಿ
‘ ತೋಡಿ ’ ರಾಗದ ಬಗ್ಗೆ ಬೇಡಿದರೆ
“ ಇನ್ನಷ್ಟು ಅನ್ನ ತೋಡೆಂ ”ದಿರಿ

‘ ವಲಜಿ ’ ರಾಗದ ಸೊಗಸನರುಹಿದರೆ
‘ ಅದ್ಯಾವ ಹೊಸ ತಿಂಡಿ ’ ಎಂದಿರಿ
ಕಾಫಿ ರಾಗದ ಇಂಪ ಪೇಳ್ದರೆ
ಮಧ್ಯರಾತ್ರಿಯಲಿ “ ಕಾಫಿ ಕಾಫಿ ” ಎಂದೊರಲಿದಿರಿ

ನೀವು ಪಲುಕುತಿದ್ದುದೇನೆಂದರೆ
“ ಸುಬ್ಬಲಕ್ಷ್ಮಿ ಹೀಗೆ ಹಾಡಕುಳಿತರೆ
ಮನೆಯಲ್ಲಾರು ಅಡಿಗೆ ಕೆಲಸ ?
ಇದೆಯೆ ಬವಣೆ ದಿವಸ ದಿವಸ” ಎಂದಿರಿ

ಸಾಕು ಅಣ್ಣಾ ಈ ಪರಿ ತ್ರಾಸ
ಹೊಟ್ಟೆಗೇಕೆ ದಿನದಿನ ಉಪಾಸ ?
ಬಾಲ ಮುರಿದೀ ಕೃಷ್ಣನೇ !
ಹಸಿವು ರಾಜ ರಾಜಗುರುವೆ !!

ಗಮಗಮಾ ಗಮಾಡಸತಾವ ದೋಸಾ
ಹೊರಟಿದ್ದೀಗ ನೀವು ಎಲ್ಲಿಗಾ ?
ತಿನ್ನಿರೈ ಹದಿನಾಲ್ಕು ದೋಸಾ
ಇಳಿಸಿರೈ ತುಪ್ಪ ವೀಸೆ ವೀಸಾ

“ಎಸ್. ನಾಗರತ್ನ”

— o —

ಅಖಾಡಾದಲ್ಲಿ ಅಗಸ

ನಮ್ಮೂರ ಅಗಸರ ಲಿಂಗ ಕುಸ್ತಿಯನ್ನೂ ಮಾಡಿದನೆಂದರೆ ನೀವು ನಂಬುವುದಿಲ್ಲ. ಆದರೆ ಅದು ನಿಜ ಅವನು ಕುಸ್ತಿ ಮಾಡಿದ. ಅವನ ಎದುರಾಳಿ ಪೈಲ್ವಾನ್ ಪುಟ್ಟಪ್ಪನನ್ನು ಗಿರಿಗಿರಿ ತಿರುವಿ ಎಸೆದು ಹನುಮಿಯನ್ನು ಲಗ್ನವಾಗಿ ಮತ್ತೆ ಮಡಿವಾಳ ಕೆಲಸಕ್ಕೆ ಹಿಂದಿರುಗುವುದಾಗಿ ಶಪಥ ಮಾಡಿದ್ದ ಲಿಂಗ.

ನಮ್ಮೂರಿನಲ್ಲಿ ಈ ಕುಸ್ತಿಯು ವೈಖರಿ ಬಹು ಮೋಜಿನಿಂದ ನಡೆಯುತ್ತದೆ. ನಶಿಸಿ ಹೋಗುತ್ತಿರುವ ಈ ಕಲೆಗೆ (ಕ್ಷಮಿಸಬೇಕು ಈ ಕೊಲೆ!!) ನಮ್ಮೂರಲ್ಲಿ ಒಂದು ವಿಶಿಷ್ಟವಾದ ಪ್ರೋತ್ಸಾಹ ದೊರಕುತ್ತದೆ ದುರುಗಪ್ಪನ ಜಾತ್ರೆ ಸಮಯದಲ್ಲಂತು ಇದಕ್ಕೆ ಇನ್ನೂ ಕಳೆ ಏರಿರುತ್ತದೆ.

ಒಂದು ಕುಸ್ತಿ ನಡೆದಾಗ ಅದು ಮುಗಿಯುತ್ತಲೆ ಮುಂದಿನ ಕುಸ್ತಿಗೆ ಜೊತೆಗಳನ್ನು ಕೂಡಿಸಿ ನಿರ್ಧರಿಸಿಬಿಡುವುದು ಕುಸ್ತಿ ನಡೆಸುವವರ ಕರ್ತವ್ಯ ನಮ್ಮೂರ ಕುಸ್ತಿ ನಡೆಯುವುದಕ್ಕೆ ಕಾರಣಪುರುಷ ಅಜ್ಜಪ್ಪ. ಈ ಮಹರಾಯ ಇಡೀ ಜೀವಮಾನ ಕುಸ್ತಿ ಏರ್ಪಡಿಸುವುದರಲ್ಲೇ ಕಳೆದಿದ್ದಾನೆಂದರೆ ತಪ್ಪಾಗಲಾರದು. ಕುಸ್ತಿಗಳು ಮುಗಿದ ಮೇಲೆ ಅಜ್ಜಪ್ಪ ಸರಿಸಮಾನ ಜೋಡಿಗಳು ಇವು ಇರಬಹುದೆ? ಎಂದು ಜೊತೆಗೂಡಿಸಿ ಅವರುಗಳಿಗೆ "ಮೆಯ್ಯು"ವುದಕ್ಕೆ ಮುಂಗಡ ಕೊಟ್ಟುಬಿಡುತ್ತಿದ್ದ.

ಅವತ್ತಿನ ಕುಸ್ತಿ ಹುಬ್ಬಳ್ಳಿ ಖಾಜೂ ಪೈಲ್ವಾನನಿಗೂ ಚಿತ್ರದುರ್ಗದ ಪೈಲ್ವಾನ್ ಮಾಯಣ್ಣನಿಗೂ ಜಂಗಾಜಂಗಿ ಹೋರಾಟ ನಡೆದು ಕುಸ್ತೀ ಮುಗಿದಾಗ ಭಾರಿ ಹಳದಿ ಕೊರೆ ರುಮಾಲು, ಕತ್ತಿಗೆ ಕರೀಧಾರ ತಾಯಿತ, ಶ್ಯಾಂಡೊ ಬನಿಯರ್ ಎದ್ದು ಕಾಣುತ್ತಿದ್ದ ಮಲ್ ಜುಬ್ಬ ಮಾಸಲು ಕಚ್ಚೆ ಪಂಚೆ ಧಾರಿಯಾಗಿ ಅಖಾಡದ ಬದಿಗೇ ಕುಳಿತಿದ್ದ ಲಿಂಗ್ಯಾ ಕೇಕ ಹೊಡೆದ.

"ಅಜ್ಜಪ್ಪಾ ನಮ್ಮ ನಿಂಗ್ಯಾಗೂ ಒಂದು ಜೊತೆ ಹೊಂದ್ಸಪ"

—ಎಂದು ಲಿಂಗ್ಯಾನ ಗುರು ಪೈಲ್ವಾನ್ ಲಚ್ಚ ಕೇಳಿದ.

"ಆವ ಏನು ಜಂಗೀ ಕುಸ್ತಿ ಮಾಡ್ತಾನೆ ತೆಗಿಯೋ ನಿನ"

—ಎಂದು ಅಜ್ಜಪ್ಪ ಒಂದೇಬಾರಿಗೆ ಲಿಂಗ್ಯಾನನ್ನು ಕೆಡವಿಬಿಟ್ಟ.

“ನೋಡಾರಾ ನೋಡ್ರೀ ಅಜ್ಜಪ್ಪೋರೆ-ಅದೂ ನಂದೊಂದು ಷರುತ್ತು ಐತೆ ನೋಡ್ರಿ ನಾನು ಆಡಿದರೆ ಪೈ|| ಪುಟ್ಟಪ್ಪನ ಮ್ಯಾಲೇ ಷಡ್ಡು ಹೊಡಿಯೋದು”-ಎಂದ ಅ|| ನಿಂಗ್ಯಾ.

—ಇಡೀ ಸಭೆಯೇ ನಗುವಿನಲ್ಲಿ ಮುಳುಗಿತು ಪೈ|| ಪುಟ್ಟಪ್ಪ ಎಂದಿಗೂ ಈ ನಿಂಗ್ಯಾನಿಗೆ ಜೋಡಿಯಲ್ಲ. ಗಿರಿಗಿರಿ ತಿರುವಿ ಪೈ|| ಪುಟ್ಟಪ್ಪ ಒಗೆದನೆಂದರೆ ಸಾಕ್ಷಾತ್ ಮಡಿವಾಳನನ್ನೇ ಬಟ್ಟೆ ಒಗೆದಂತೆ ಒಗೆದು ಕೆಡವಿದಂತಾಗುತ್ತಿತ್ತು.

“ಏ ಯಾಕೆ ಸುಮ್ಮನೆ ಸಾಯ್ತಿ ಬಿಡಲೇ ಬಡಕಲ್ಯಾ’ ಎಂದು ಪಶ್ಚಾತ್ತಾಪದ ಉದ್ಗಾರ ಎಳೆದು ಮಾತಾಡಿದ ಗುಂಪಿನಲ್ಲಿದ್ದ ರಿಟೈರ್ಡ್ ಪೈಲ್ವಾನ. ತಮ್ಮ ಶಿಷ್ಯನಿಗೆ ಅವಮರ್ಯಾದೆ ಆದರೆ ತಡೆಯುವ ರಕ್ತವೇ ಲಿಂಗ್ಯಾನ ಗುರು ಲಚ್ಚನದು.

“ಸುಮ್ಮಗೆ ಕುಂದ್ರಲೇ ಇವನ್ಯಾವನು ಆಡೋರಾಡ್ತರೆ ಹುಡ್ರು, ಈ ಮುದುಕುಂದೇ ಭಾಳ ಮಾತಾತು ಬಿಡು” ಎಂದು ಕವಕ್ಕನೆ ಆ ರಿಟೈರ್ಡ್ ಪೈಲ್ವಾನನ ಮೇಲೆ ಎಗರಲಾಡಿದ ಲಿಂಗನ ಗುರು ಲಚ್ಚ.

“ಯಜಮಾನಪ್ಪಂಗೆ ‘ಅಲೆ ಪಲೆ’ ಅಂತಿಯಲ್ಲಲ್ಲೇ; ಹಂಗ ವದ್ದೇಂದ್ರೆ ಟೊಂಕಾನೆ ಮುರ್ರೀತು ನೋಡು” ಎಂದು ಲಚ್ಚ್ಯಾನ ಮೇಲೆ ಬಿದ್ದ ಆ ರಿಟೈರ್ಡ್ ಪೈಲ್ವಾನನ ಶಿಷ್ಯ ಸಾಕ್ಷಾತ್ ಲಿಂಗನ ವೈರಿ ಪೈ|| ಪುಟ್ಟಪ್ಪ.

ಮೊದಲೇ ತಿಮರು ಮೇಲೆ ಪಿತ್ತವೂ ಕೆರಳಿದರೆ ಕೇಳಬೇಕೆ? ಕುಸ್ತಿಯ ಮ್ಯಾನೇಜರ್ ಅಜ್ಜಪ್ಪ ಅಡ್ಡ ಬರದೇ ಇದ್ದಿದ್ರೆ ನಾಲ್ಕು ಹೆಣಾನಾದ್ರೂ ಅವತ್ತು ಅಖಾಡದಲ್ಲಿ ಒರಗುತ್ತಿತ್ತೆಂದು ಜನ ಮಾತಾಡಿಕೊಂಡರು.

“ಈ ಆ ಗಬುಕಾರಾ ಏನ್ರಲೇ” ಎಂದು ಆರ್ಭಟಿಸಿದ ಅಜ್ಜಪ್ಪ. “ನನ್ನ ಷಾಗಿರ್ದ್ ಲಿಂಗ್ಯಾ—ಆ ಸೊಕ್ಕಿನ ಪುಟ್ಯಾ ಇಬ್ರಿಗೂ ಜೋಡಿ ಹಾಕಿ ಬಿಡ್ರೀ....” ಎಂದು ಸವಾಲು ಬಿಗಿದ ಲಿಂಗ್ಯಾನ ಗುರು ಲಚ್ಚ.

“ಆಕ್ರೋ ಯಾಕೆ ಬಡಿದಾಡಿ ಸಾಯ್ತಿರಿ–ಏ ಲಿಂಗ್ಯಾ ಮುಂದಿನ್ ತಿಂಗ್ಳು ನಿಂದೂ ಪುಟ್ಟಪ್ಪಂದು ಕುಸ್ತಿ ಆಗಿ ಬಿಡವಲ್ದ್ಯಾಕೆ ಬಿಡೊ....” ಎಂದು ಜಿಗುಪ್ಸೆಯಿಂದ ಎರಡು ಮರಿ ಪೈಲ್ವಾನ ಕುಸ್ತಿಗೆ ಒಂದು ಅವಕಾಶ ಕಲ್ಪಿಸಿದ ಅಜ್ಜಪ್ಪ.

“ನಾನು ಅವನು ಕೂಡಾ ಆಡೂದಾ! ಬಿಡ್ರೀ ಯಾತರ ಮಾತು....ನರಿ ಸಂಗ್ತಿ ಹುಲಿ ಜೋಡಿ ಆಗ್ತದೇನಜ್ಜಪ್ಪಾ....” ಎಂದು ತಿರಸ್ಕಾರದ ನಗೆ ನಕ್ಕಿದ್ದ ಪೈಲ್ವಾನ್ ಪುಟ್ಟಪ್ಪ.

ಇದನ್ನೇ ಕಾದಿದ್ದ ಅಗಸರ ಪೈಲ್ವಾನ್ ಲಿಂಗ ಕೇಕೆ ಹೊಡೆದ "ಗೊತ್ತಿತ್ತು ಬಿಡ್ರೀ .ಆ ಪುಟ್ಯಾ ನನ್ನ ಕೂಡ ಆಡಾಕೆ ಹೆದರಿ ಹಿಂಗಂತಾನೇಂತ ಗೊತ್ತಿತ್ತು ಬಿಡ್ರಿ" ಎಂದು ನಕ್ಕುಬಿಟ್ಟ ಲಿಂಗ.

ರೇಗಿತು ಪುಟ್ಟಪ್ಪನಿಗೆ. "ಹಂಗೇನಲೇ ಲಿಂಗ್ಯಾ....ಸಾಯಿ" ಎಂದು ಷಡ್ಡು ಹೊಡೆದು ಲಿಂಗ್ಯಾನ ಕೈ ಕುಲುಕಿ ಕೇಕೇ ಹೊಡೆದು ಜೊತೆ ಹಾಕಿಕೊಂಡ.

ತನ್ನ ವೈರಿ ಪುಟ್ಯಾನ ಜೊತೆ ಕುಸ್ತಿ ಜಿದ್ದು ಹಾಕಿಕೊಂಡಮೇಲೆ ಅಜ್ಜಪ್ಪನ ಬಳಿ ಬಂದು "ಅಜ್ಜಪ್ಪಾ ಮತ್ತೆ ಮೆಯ್ಯಾಕೆ ರೊಕ್ಕ ಒಂದೈದು ರೂಪಾಯಿ ಜಾಸ್ತಿ ಕೊಡಪ್ಪಾ ಎಂದ.

--ಕುಸ್ತಿ ಜೊತೆ ಹೊಂದ್ಸಿದಮೇಲೆ ಆ ಜೋಡಿಗೆ ತಾಕತ್ತು ತೆಗೆದುಕೊಂಡ. ಮುಸ್ತಿಯಾಗಿ ಕುಸ್ತಿಗಿಳಿಯಲು "ಮೆಯ್ಯ"ಲು ಮುಂಗಡ ಕೊಡುವುದು ಪದ್ಧತಿ. ಇದಲ್ಲದೆ ನಮ್ಮೂರ ಪೈಲ್ವಾನರನ್ನು ಕಂಡರೆ ವರ್ತಕರ ವರ್ಗಕ್ಕೆ ಏನೋ ಪ್ರೀತಿ ವಾತ್ಸಲ್ಯ. ತಿಂಗಳು ತಿಂಗಳು ಆಗುವ ಜಂಗಿ ಕುಸ್ತಿಗಳ ಪೈಲ್ವಾನರಿಗೆ ಅನೇಕ ಅಂಗಡಿಗಳವರು ಆಶ್ರಯ ಕೊಟ್ಟು ಮೇಯ್ದು ಕೊಬ್ಬಿ ಅಖಾಡದಲ್ಲಿ ಕುಸ್ತಿಗಿಳಿಯಲು ಅವರುಗಳು ಸಹಾಯ ಮಾಡುವುದು ಒಂದು ರೀತಿಯ ದೊಡ್ಡಸ್ತಿಕೆ.

ಕುಸ್ತಿಯ ದಿನ ತಾವು ಮೇಯಿಸಿ ಕೊಬ್ಬಿಸಿದ ಪೈಲ್ವಾನ ಅಖಾಡಕ್ಕೆ ಇಳಿದಾಗ ಪ್ರೋತ್ಸಾಹದ ಕೇಕೆ ಹಾಕಿ ಬೆಂಬಲ ಕೊಟ್ಟು ಕೂಗುತ್ತಾ ಅವನ ಚಮತ್ಕಾರದ ಪಟ್ಟುವರಸೆಗಳನ್ನು ಮೆಚ್ಚಿಕೊಳ್ಳುವುದು ರೂಢಿ.

ಹೀಗೆ ಜೊತೆಗೂಡಿಸಿಕೊಂಡ ಪೈಲ್ವಾನ್ ಪುಟ್ಯಾ, ಅ|| ಪೈಲ್ವಾನ್ ಲಿಂಗ್ಯಾ ಮೆಯ್ಯಬೇಕಲ್ಲವೆ? ಲಿಂಗನ ಗುರು ಲಚ್ಚ ಲಿಂಗನೊಡಗೂಡಿ "ಚಹಾದಂಗಡಿ ಗುರುಬಸ್ಯ"ನ ಹೋಟ್ಲಿಗೆ ಹೋದರು

"ಗುರ‍್ಬಸಣ್ಣಾ ನಂಮ್ಮ ಲಿಂಗ್ಯಾಂದು ಕುಸ್ತಿ ಐತಪ್ಪ.." ಎಂದು ಪೀಠಿಕೆ ಹಾಕಿ ಅವನ ಕೃಪೆಯಿಂದ ಲಿಂಗ್ಯಾ ಮೆಯ್ಯಬೇಕು ಕುಸ್ತೀಲಿ ಗೆಲ್ಲಬೇಕು ಎಂದು ಕೈಹೊಸೆದ.

"ಯಾಕಪಾ ಲಚ್ಚ ಖಾಲಿದ್ವಾಸಿ ಮುಂಡಕ್ಕೆ ಉಸುಳಿವಳಗೆ ಏನು ಮೆಯ್ತಾನೋ ಇವನ ಮುಂಜ್ವಾಳಾಗ ಸುಮ್ಕೆಯಾಕೆ ಸಾಯಿಸ್ತಿ ಅಲೇ ಈ ಮಡಿವಾಳನ್ನಾ; ಬಟ್ಟೆ ವಗಿಯಾದು ಬಿಟ್ಟು ಕುಸ್ತಿ ಮಾಡಾಕೆ ಹೊಕ್ಕನಂತೇಸು ಈ ಶಿಂಗ್ಲೀಕ"

— ಎಂದು ನಗೆಯಾಡಿದ ಗುರುಬಸಣ್ಣ. "ಏಯ್ ಚಾಸ್ತಿ ಮಾಡಬ್ಯಾಡ ಬಿಡು ಬಸಣ್ಣ....ತುಪ್ಪದ ದ್ವಾಸಿ ಮಾಡಿ ಹಾಕ್ಸಪಾ ನಿನ್ಹೆಸರು ಹೇಳಿ ಗೆಲ್ಲಿ

ನಮ್ಹುಡುಗಾ" ಎಂದೆನುತ್ತಾ ಅಡಿಗೆ ಮನೆಯಿಂದ ಹೊಯ್ಯುತ್ತಿದ್ದ ದೋಸೆಯ ಶಬ್ದ ದೊಡ್ಡ ಬುಟ್ಟಿಯಲ್ಲಿ ರಾಗಿ ಮಂಡಕ್ಕಿ ಉಸುಳಿ (ಪುರಿಯ ಉಸುಳಿ) ಒಂದು ನಿಂಬೆ ಹೋಳಿಕೆ ಎರಡು ಮೆಣಸಿನ ಕಾಯಿ ಅದಕ್ಕೆ ಚುಚ್ಚಿದ ಊದುಬತ್ತಿಯೊಡನೆ ಬಹು ಮೋಹಕವಾಗಿ ಕಂಡಿತು.

—ಅರೆ!... ಈ ಚಹಾದಂಗಡಿ ಎದುರುಗಿನ ಕಡ್ಲೆಪುರಿ, ಖಾರಶಾವೆ, ವಡೆ, ಮೆಣಸಿನಕಾಯಿ ಬೂಂದಿ ಅಂಗಡಿ ಚನ್ನವೀರನ ಹತ್ತಿರ ಲಿಂಗ್ಯಾನ ಎದುರಾಳಿ ಪುಟ್ಟಪ್ಪ ಮೀಸೆ ತಿರುವುತ್ತಾ ನಿಂತಿದ್ದ. ಲಿಂಗ್ಯಾ ಒಂದು ಚಹಾದಂಗಡಿ ಗುರುಬಸಣ್ಣನ ಕೃಪಾಪೋಷಿತನಾಗಲು ಹವಣಿಸುವಾಗ ಪೈಲ್ವಾನ್ ಪುಟ್ಟಪ್ಪ ಮಂಡಕ್ಕಿ ಖಾರದ ಅಂಗಡಿ ಚೆನ್ನವೀರನ ಕೃಪಾಶ್ರಯ ಪಡೆಯಬಾರದೇಕೆ? ಊರ ಪ್ರತಿಷ್ಟೆಗೆ ಧಕ್ಕೆ ಬಾರದಂತೆ ನಮ್ಮೂರ ಪೈಲ್ವಾನ ಮೆಯ್ಯಲಿಕ್ಕಿಲ್ಲದೆ ಅಖಾಡಕ್ಕೆ ಇಳಿಯದೆ ಹೋದ ಎಂಬ ಅಪಖ್ಯಾತಿ ಬಾರದಂತೆ ಊರ ಮರ್ಯಾದೆ ಕಾಯುವುದು ಊರ ಪ್ರತಿಷ್ಠಿತರ ಕರ್ತವ್ಯವಲ್ಲವೆ?

—ಎದುರು ಬದರು ಅಂಗಡಿಗಳಾದ ಮೇಲೆ ಪೈಪೋಟಿ ಇಲ್ಲದೆ ಉಂಟೆ? ಲಿಂಗ್ಯ-ಪುಟ್ಟಪ್ಪಗಳು-ಗುರುಬಸ್ಯ-ಚಿನ್ನವೀರರ ಜಿದ್ದಿನ ಮೇಲೆ ಮೆಯ್ಯ ತೊಡಗಿದರು.

* * * *

ಕುಸ್ತಿ ದಿನವೂ ಬಂತು. ಅಜ್ಜಪ್ಪ ಅಖಾಡದಲ್ಲಿ ಲಿಂಗ್ಯಾ-ಪುಟ್ಟಪ್ಪಗಳಿಗೆ ಕಾದಿದ್ದ. ಎಲ್ಲಾ ಜೊತೆಗೂ ಕೇಕೆ ಷಡ್ಡು ಹೊಡೆಯುತ್ತಿರುವಾಗ ಲಿಂಗ್ಯಾ-ಪುಟ್ಯ ಏಕೆ ಬರಲಿಲ್ಲ? ಕಡೆಗೊಮ್ಮೆ ಲಚ್ಚ ಲಿಂಗ್ಯಾನನ್ನು ಹೊತ್ತು ತಂದ.

ಪುಟ್ಯಾನ ಕಡೆ ಚೆನ್ನವೀರ ಅವನ ಗುರು ಯಾರೂ ಪತ್ತೆ ಇಲ್ಲ.

" ಏಯ್ ಮೆಯ್ಯಾಕೆ ರೊಕ್ಕ ತಗಂಡಗಲ್ರಲೇ... ಅಖಾಡಕ್ಕೆ ಬರ್ರಿ... ಬ್ಯಾಡಾ ಬ್ಯಾಡಾಂತ ಬಡಕಂಡೆ ಕೇಳಿದಿರ್ಯಾ ಏ ಪುಟ್ಯಾ ಏಲ್ರೊ .. ಲಿಂಗಾ ಕಾಚಾ ಬಿಗಿಯಲೇ ಸುಮ್ಕೆ ಕೊಂತ್ಕಂಡ್ರೆ ಕುಸ್ತಿ ಆಗ್ತದಾ...."

—ಎಂದು ಕುಸ್ತಿ ಕಂಟ್ರಾಕ್ಟರ್ ಅಜ್ಜಪ್ಪ ಕೂಗಾಡಿದ. ಪೈ|| ಪುಟ್ಯಾ ಪತ್ತೆ ಇರಲಿಲ್ಲ....ಹ್ಯಾಗೆ ಬಂದಾನು!! ಬಾದಾಮಿ ಹಾಲು, ಕರ್ಜೂರ, ಕಲ್ಸಕ್ರೆ, ಕೊಬ್ರಿ, ತುಪ್ಪ, ಬೆಣ್ಣೆ, ಹಣ್ಣು, ಸಾಮು, ಕುಸ್ತಿ ವರಸೆ, ಪಟ್ಟು, ಇವೆಲ್ಲಾ ಇದ್ರೆ ಪೈಲ್ವಾನ ಆದಾನು ಮಂಡಕ್ಕಿ ಅಡೀಲಿ ಸಿಕ್ಕಿದ್ದು ಕಡ್ಲೆಪುರಿ, ಖಾರಾಸೇವೆ!

ಒಂದು ತಿಂಗಳಿಂದ ಬರೀ ಆ ಕಡ್ಲೆಹಿಟ್ಟಿನ ಖಾರಸೇವೆ, ಬೋಂಡ, ಮೆಣ್ಸಿನ ಕಾಯಿ ಬೆಳಗ್ಗೆ, ಮಧ್ಯಾಹ್ನ, ಸಂಜೆ ಮೆಯ್ದು ಕುಸ್ತಿ ಆಡಲು ಸಾಧ್ಯವೆ? ಕುಸ್ತಿ ಸಮಯಕ್ಕೆ ಹೊಟ್ಟೆ ಊದಿತ್ತು ಪೈ|| ಪುಟ್ಟಪ್ಪನಿಗೆ. ಲಿಂಗ್ಯಾನೇನು ಕಡಿಮೆ

ಮೆಯ್ದನೆ? ಆ ಚಹಾದಂಗಡಿ ಚೆನ್ನವೀರನ ದ್ರಾಕ್ಷಿ ಅಂಗಡೀಲಿ!! ಬರೀ ಖಾಲಿ ಹಲ್ಲ್ಯ ಚಟ್ನಿ ಚಹ ಇದನ್ನ ಮೆಯ್ದರೆ ಮಡಿವಾಳ ಲಿಂಗ್ಯಾ ಪೈ॥ ಲಿಂಗಪ್ಪ ಆದಾನೆ? ಶಿಂಗ್ಲೀಕನಿಗೆ ಇಂಗ್ಲೀಕದ ಕಷಾಯ ಕುಡಿಸಿದರಂತೆ ಹಾಗಾಗಿತ್ತು. ಆದರೂ ಹೊತ್ತಿಗೆ ಸರಿಯಾಗಿ ಲಚ್ಚ ಲಿಂಗ್ಯಾನ್ನ ಹೊತ್ತು ತಂದಿದ್ದ. ಹೆಸಂಗೆ ಇಸಮಾದರೂ ಇದ್ದ ಆದರೆ ಪುಟ್ಟ!!!

ನಮ್ಮೂರು ಆಸ್ಪತ್ರೇಲಿ ಅವನ ಹೊಟ್ಟೆ ಸರಿಪಡಿಸೋದು ಸಾಧ್ಯವಿಲ್ಲ ಅಂತ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಸಾಗಿಸಿದ್ದರು ಅವನ್ನ. ಅಚ್ಚಪ್ಪ ಅರಚಿದ. ಲಿಂಗ್ಯಾ "ನಾನು ತಯಾರಿದನ್ರೀ ಪುಟ್ಟ ಎಲ್ಲಿ" ಎಂದು ನರಳಿದ. ಸ್ಟ್ರೆಚರ್ ಮೇಲೆ ಎದ್ದು ಕುಳಿತ ಲಿಂಗ್ಯಾ, ನರಳುತ್ತಾ ಹನುಮಿಯನ್ನ ನೆನೆದ.

....ಯಾಕೆ ಹೇಳಾಕೆ ಬಂದೆಂದ್ರೆ ...ಮೆಯ್ಯಬೇಕಾದರೂ ಬಾದಾಮಿ ಮೆಯ್ಯ ಬೇಕು ಹುರುಗಡ್ಲೆ, ಖಾರಾಶಾವೆ ಅಂಗಡೀಲಿ ಬಾದಾಮಿ ಎಲ್ಲಿಂದ ಬರಬೇಕು?

....ಮೆಯ್ಯೋ ಹೊಲದಲ್ಲಿ ಮೇಯಬೇಕು ಮರಳು ಕಾಡಲ್ಲಿ ಮೇಯ್ದರೇನು ಬಂತು? ಎಲೈ ಮಾನವರಿರಾ, ಭಾರತೀಯರಾ, ಮೈಸೂರಿಗರಾ ಚಿತ್ರೆ ಪಲ್ರೆ ಸೊಪ್ಪು ಮೆಯ್ಯಬೇಡಿ ಭಂಡಾರ ಲೂಟಿ ಹೊಡೆದು ಜೈಲಿಗೆ ಹೋಗಿ ಅಷ್ಟೆ ಲಿಂಗ್ಯಾ ಪುಟ್ಟರಂತೆ ಮೆಯ್ದು ಅವಮಾನಿತರಾದೀರಿ ಅವಸರದಲ್ಲಿ ಅಖಾಡಕ್ಕಿಳಿದರೆ ಉಸಾರ್.

—ಬಂಗಾರಯ್ಯ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Korsavanji, April, 1963.

Koravanji, April, 1963.


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.
FAS

REG. NO. B. G. 343 KORAVANJI FEB. 1963.

Printed by B. S. Iyengar, Bangalore City.

Publisher—B. N. Gupta. Editor—M. Sivaram.